ANANTHKUMAR PRATISHTHANA

# ಅನಂತಪಥ

ಸಂಪುಟ - 2 ಏಪ್ರಿಲ್ - 2022 ಸಂಚಿಕೆ - 22



ನಾನು ಕಂಡಂತೆ ಅನಂತಕುಮಾರ್

ಶ್ರೀ ವಿ. ಸುನಿಲ್ ಕುಮಾರ್

'ಹೊಸತನ, ಗೆಳೆತನ ಮತ್ತು ನಿರಂತರತೆಯ ಆದರ್ಶವ್ಯಕ್ತಿ' ಪುಟ 2

# ಕಾಶ್ಮೀರ, ಕರ್ನಾಟಕ ಮತ್ತು ಅನಂತಕುಮಾರ್

ಅನಂತಕುಮಾರರಿಗೆ ಕಾಶ್ಮೀರದ ನಂಟು ತಮ್ಮ ಶಾಲಾ ದಿನಗಳಿಂದಲೆ ಪ್ರಾರಂಭವಾಗಿತ್ತು. ಅನಂತಕುಮಾರ್ ಅವರು ಪ್ರಾಥಮಿಕ ಶಾಲೆಯಲ್ಲಿದ್ದಾಗ ಸ್ಕೌಟ್ಸ್ ಗೈಡ್ಸ್ ವತಿಯಿಂದ ರೈಲ್ವೇ ಇಲಾಖೆಯ ಸಹಯೋಗದೊಂದಿಗೆ ಕೆಲ ಆಯ್ದ ಬುದ್ಧಿವಂತ ಮತ್ತು ಚುರುಕು ವಿದ್ಯಾರ್ಥಿಗಳಿಗೆ 15 ದಿನಗಳ ಕಾಲ ಜಮ್ಮು-ಕಾಶ್ಮೀರ ಪ್ರವಾಸ ಏರ್ಪಡಿಸಿದ್ದರು. ಹೀಗೆ ಆಯ್ದ ಕೆಲ ಬುದ್ದಿವಂತ ವಿದ್ಯಾರ್ಥಿಗಳ ಪೈಕಿ ಅನಂತಕುಮಾರ್ ಒಬ್ಬರಾಗಿದ್ದರು. ಹೀಗಾಗಿ ಬಾಲ್ಲದಲ್ಲಿಯೇ ಕಾಶ್ಮೀರದ ಎಲ್ಲಾ ಸ್ಥಳಗಳಿಗೆ ಅನಂತಕುಮಾರ್ ಭೇಟಿ ನೀಡಿದ್ದರು. ನಂತರ ಅನಂತಕುಮಾರ್ ತಮ್ಮ 17 ನೇ ವಯಸ್ಸಿನಲ್ಲಿಯೇ ವಿದ್ಯಾರ್ಥಿ ಪರಿಷತ್ತಿನಲ್ಲಿ ಸಕ್ರಿಯ ಕಾರ್ಯಕರ್ತರಾಗಿ ಅನೇಕ ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸಿದ್ದರಿಂದ ದೇಶದ ಆಗು ಹೋಗುಗಳ ಸಂಪೂರ್ಣ ಮಾಹಿತಿಯನ್ನು ಪಡೆದಿದ್ದ ರಿಂದ ಅವರು ಅಸ್ಸಾಂ ಚಳುವಳಿ ಹಾಗೂ ಕಾಶ್ಮೀರದ 370ನೇ ವಿಧಿಯ ಬಗ್ಗೆ ಅನೇಕ ಸಂಗತಿಗಳನ್ನು ಚೆನ್ನಾಗಿ ತಿಳಿದುಕೊಂಡಿದ್ದರು.

ವಿದ್ಯಾರ್ಥಿ ಪರಿಷತ್ತಿನಲ್ಲಿ ಪ್ರಾಂತ ಅಭ್ಯಾಸ ವರ್ಗಗಳಲ್ಲಿ ಕಾಶ್ಮೀರದ ವಿಷಯ ಬಂದಾಗ ಅಂಕಿ ಅಂಶಗಳ ಸಮೇತ ಒಂದುವರೆ ಘಂಟೆಗಳಿಗಿಂತ ಹೆಚ್ಚು ಸಮಯ ನಿರರ್ಗಳವಾಗಿ ಭಾಷಣವನ್ನು ಮಾಡುವ ಸಾಮರ್ಥ್ಯವನ್ನು ಅನಂತಕುಮಾರ್ ಹೊಂದಿದ್ದರು. 370ನೇ ವಿಧಿಯಿಂದ ದೇಶದ ರಕ್ಷಣೆ ಆಗುತ್ತಿರುವ ತೊಂದರೆಗಳು ಮತ್ತು ಯಾವ ರೀತಿ ಈ ವಿಧಿಯಿಂದ ಭಯೋತ್ಪಾದಕ ಕೃತ್ಯಗಳಿಗೆ ಅನೂಕೂಲವಾಗಿದೆ ಎಂಬ ಎಲ್ಲಾ ವಿಷಯದ ಬಗ್ಗೆ ಅವರು ದೀರ್ಘವಾಗಿ ಮಾತನಾಡುತ್ತಿದ್ದರು. ಹಾಗಾಗಿ ಕಾಶ್ಮೀರದ ವಿಷಯ ಬಂದಾಗ ಭೌದ್ಧಿಕ ತರಬೇತಿ ಶಿಬಿರಗಳಲ್ಲಿ ಅನಂತಕುಮಾರ್ ಅವರು ಮಾತನಾಡಬೇಕು ಎಂದು ಅನೇಕ ಪರಿಷತ್ತಿನ ಕಾರ್ಯಕರ್ತರು ಕೇಳುತ್ತಿದ್ದರು. ಅಷ್ಟರ ಮಟ್ಟಿಗೆ ಅನಂತಕುಮಾರ್ ಅವರು ಕಾಶ್ಮೀರದ ವಿಷಯದಲ್ಲಿ ಜ್ಞಾನವನ್ನು ಹೊಂದಿದ್ದರು.

1990, ಜನವರಿ 19 ಮತ್ತು 20 ರ ನಡುವಣ ರಾತ್ರಿಯು ಕಾಶ್ಮೀರಿ ಹಿಂದೂಗಳ ನೂರಾರು ಜನರ ಹತ್ಯೆಯಾಯಿತು. ಐದು ಲಕ್ಷಕ್ಕೂ ಹೆಚ್ಚು ಜನರು ತಮ್ಮದೇ ನೆಲದಲ್ಲಿ ನಿರಾಶ್ರಿತರಾಗುವಂತಾಯಿತು. ನೆಲೆ ಕಳೆದುಕೊಂಡ ಕಾಶ್ಮೀರಿ ಹಿಂದೂಗಳು ಮೊದಲಿನ ಕೆಲವು ತಿಂಗಳುಗಳನ್ನು ಜಮ್ಮು ನಗರದ ಗುಡಾರಗಳಲ್ಲಿ ಕಳೆದರು. ಕಣಿವೆಗೆ ಮರಳುವ ಕನಸು ಕಮರುತ್ತಿದ್ದಂತೆ ಅನೇಕರು ದೇಶದ ಹಲವು ಭಾಗಗಳಿಗೆ ಚೆದುರಿ ಹೋದರು. ಹಾಗೆ ಹೋದವರಲ್ಲಿ ಅನೇಕರು ಬೆಂಗಳೂರಿಗೂ ಬಂದರು. ಬೆಂಗಳೂರಿನ ಸಾರ್ವಜನಿಕ ಉದ್ದಿಮೆಗಳಲ್ಲಿ ಕೆಲಸ ಮಾಡುತ್ತಿದ್ದ ಕಾಶ್ಮೀರಿಗಳು ಅವರ ನೆರವಿಗೆ ನಿಂತರು.

ಜಮ್ಮುವಿನಲ್ಲಿದ್ದ ಎಚ್.ಎಂ.ಟಿ. ಕಂಪನಿಯು ಮುಚ್ಚಿದ್ದ ರಿಂದ ಬೆಂಗಳೂರಿನಲ್ಲಿದ್ದ ಎಚ್. ಎಂ. ಟಿ. ಕಂಪನಿಯಲ್ಲಿ ಅನೇಕ ಜನರು ಉದ್ಯೋಗ ಮಾಡಲು ಅವರ ಕುಟುಂಬ ಸಮೇತರಾಗಿ ಬಂದರು. ಹೀಗೆ ಬಂದವರನ್ನು ಬೆಂಗಳೂರಿನಲ್ಲಿ ವ್ಯವಸ್ಥೆ ಮಾಡಲು ಅನಂತಕುಮಾರ್ ಅವರು ಕೇಂದ್ರದ ಹಿರಿಯ ನಾಯಕರಾದ ಮುರಳಿ ಮನೋಹರ್ ಜೋಶಿ ಹಾಗೂ ಇತರ ನಾಯಕರ ಜೊತೆಗೆ ಸಂಪರ್ಕ ಮಾಡಿ ಅವರಿಗೆ ಇರಲು ಬೇಕಾದ ವ್ಯವಸ್ಥೆಯನ್ನು ಮಾಡಿದ್ದರು.

ಅನಂತಕುಮಾರರು 1990 ರಿಂದಲೂ ವಿಸ್ಥಾಪಿತ ಕಾಶ್ಮೀರಿಗಳ ಹಿತೈಷಿಗಳಾಗಿದ್ದರು. ಆಗ ಅವರಿಗೆ ಯಾವ ಅಧಿಕಾರವೂ ಇರಲಿಲ್ಲ. ಅವರು ಮತ್ತು ಯಡಿಯೂರಪ್ಪನವರು ಕರ್ನಾಟಕದಲ್ಲಿ ಭಾರತೀಯ ಜನತಾ ಪಕ್ಷವನ್ನು ಕಟ್ಟುವ ಕೆಲಸದಲ್ಲಿ ನಿರತರಾಗಿದ್ದರು. ಆದರೂ ಕರ್ನಾಟಕದ ಜನತೆ ತಮಗೆ ಆಶ್ರಯ ನೀಡಬಹುದೆಂಬ ನಿರೀಕ್ಷೆಯಿಂದ ಬೆಂಗಳೂರಿಗೆ ಸಾವಿರಾರು ಮೈಲಿಗಳ ದೂರದಿಂದ ಬಂದ ನಿರಾಶ್ರಿತರಿಗೆ ತಮ್ಮ ಸಂಪೂರ್ಣ ಬೆಂಬಲವನ್ನು ನೀಡಲು ಅನಂತಕುಮಾರ್ ಹಿಂಜರಿಯಲಿಲ್ಲ. ಎಲ್ಲ ಹಂತದಲ್ಲಿಯು ಅವರಿಗೆ ಬೇಕಾದ ಸಹಾಯಗಳನ್ನು ಕೇಂದ್ರದ ಹಿರಿಯ ನಾಯಕರಿಂದ ಮಾಡಿಸಿಕೊಟ್ಟರು.




ಮುಂದಿನ ಹತ್ತು ವರ್ಷಗಳಲ್ಲಿ ಹೀಗೆ ಬೆಂಗಳೂರಿನಲ್ಲಿ ನೆಲೆನಿಂತ ಕುಟುಂಬಗಳ ಸಂಖ್ಯೆ 500 ದಾಟಿತು. ಕಾಶ್ಮೀರವು ಕಣ್ಣಿನಿಂದ ಮರೆಯಾದರೂ ಕರುಳಿನಿಂದ ದೂರವಾದೀತೇ? ಕಾಶ್ಮೀರಕ್ಕೆ ಮರಳುವಂತಿಲ್ಲ. ಆದರೆ ಇದ್ದಲ್ಲಿಯೇ ತಮ್ಮ ಸಂಸ್ಕೃತಿಯನ್ನು ಉಳಿಸಿ ಸಂಭ್ರಮಿಸೋಣ ಎಂಬ ಮಹದಾಸೆಯಿಂದ ತಮ್ಮ ಸಾಂಸ್ಕೃತಿಕ ಚಟುವಟಿಕೆಗಳಿಗಾಗಿ ಬೆಂಗಳೂರಿನಲ್ಲಿಯೇ ಒಂದು ಭವನವನ್ನು ನಿರ್ಮಿಸಿಕೊಳ್ಳಲು ಅನಂತಕುಮಾರರ ಸಹಾಯವನ್ನು ಕೋರಿದರು. ಈ ಹೊತ್ತಿಗೆ ಆಗಲೇ ಅನಂತಕುಮಾರ್ ಅವರು ಬೆಂಗಳೂರಿನ ಸಂಸದರಾಗಿ ಆಯ್ಕೆಯಾಗಿದ್ದರು. ಪಕ್ಷದ ವೇದಿಕೆಗಳಲ್ಲಿ ಕಾಶ್ಮೀರ ಸಮಸ್ಯೆಯ ಪ್ರಸ್ತಾಪವನ್ನು ನಿರಂತರವಾಗಿ ಎತ್ತುತ್ತಿದ್ದರು. ತಾವು ನಾಯಕತ್ವ ವಹಿಸಿದ್ದ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತು ಕಾಶ್ಮೀರ ಸಮಸ್ಯೆಯನ್ನು ಪ್ರಧಾನವಾಗಿ ಪರಿಗಣಿಸುವಂತೆ ಪ್ರೇರಣೆ ನೀಡಿದರು.

ಈ ಹಿನ್ನೆಲೆಯಲ್ಲಿ ತಮ್ಮನ್ನು ಭೇಟಿಯಾಗಲು ಬಂದ ಕಾಶ್ಮೀರಿ ಹಿಂದೂಗಳ ನಿಯೋಗವನ್ನು ಅಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎಸ್. ಎಂ. ಕೃಷ್ಣ ಅವರ ಬಳಿಗೆ ಕೊಂಡೊಯ್ದರು.

ಪುಟ 4 ರಲ್ಲಿ ಮುಂದುವರೆದಿದೆ



ಕಾಶ್ಮೀರದ ಪುನರುತ್ಥಾನ ಸಮಗ್ರ ದೇಶದ ಹೊಣೆ

ಆಶುತೋಷ್ ಭಟ್ನಾಗರ್


ಪುಟ 3



" ಕಾಶ್ಮೀರ ಬರಿಯ ಪ್ರವಾಸಿ ತಾಣವಲ್ಲ, ಪ್ರಾಚೀನ ನಾಗರಿಕತೆಯ ತವರು"

ಆರ್ ಕೆ ಮಟ್ಟೂ

ಪುಟ 7



ಮಹಾಮಂಡಲೇಶ್ವರಿ ರಾಣಿ ಚೆನ್ನಭೈರಾದೇವಿ

ಕೆ ಜನಾರ್ದನ ತುಂಗ

ಪುಟ 9



ಅದಮ್ಯ ಚೇತನದ ವಿಶಿಷ್ಟ ಪ್ರಯೋಗ

ಪುಟ 10

# 'ಹೊಸತನ, ಗೆಳೆತನ ಮತ್ತು ನಿರಂತರತೆಯ ಆದರ್ಶವ್ಯಕ್ತಿ'



ಶ್ರೀ ವಿ. ಸುನಿಲ್ ಕುಮಾರ್
ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಇಂಧನ ಸಚಿವರು, ಕರ್ನಾಟಕ ಸರ್ಕಾರ

## ನಾನು ಕಂಡಂತೆ



## ಅನಂತಕುಮಾರ್

ಸಮಕಾಲೀನ ಸಮಾಜದಲ್ಲಿ ಯುವಕರಿಗೆ ಆದರ್ಶಗಳೇ ಇಲ್ಲವೆಂಬ ಕಾಲದಲ್ಲಿ ರಾಜಕೀಯದ ಬಾನಿನಲ್ಲಿ ಕಂಡುಬಂದ ಅಪರೂಪದ ತಾರೆ, ಸನ್ಮಾನ್ಯ ಅನಂತಕುಮಾರ್. ಅವರ ಜೀವನವನ್ನು ಗಮನಿಸುವ ಮೂಲಕವೇ ನಾಯಕತ್ವದ ಲಕ್ಷಣಗಳನ್ನು ಮೈಗೂಡಿಸಿಕೊಳ್ಳಬಹುದು. ಅವರ ಸಾಮೀಪ್ಯವು ನಮ್ಮಲ್ಲಿ ಅನೇಕರನ್ನು ಬೆಳೆಸಿತು ಎಂದರೆ ಅದು ಅತಿಶಯೋಕ್ತಿಯಲ್ಲ.

ನಾನು 2004ರಲ್ಲಿ ಮೊದಲನೇ ಬಾರಿ ಶಾಸಕನಾಗಿ ಆರಿಸಿ ಬಂದಾಗ ನನಗೆ 27 ವರ್ಷ. ಅಂದಿನಿಂದ 2018ರಲ್ಲಿ ಮರು ಆಯ್ಕೆಯಾಗುವ ವರೆಗೂ ನನಗೆ ಅನಂತಕುಮಾರರ ಜೊತೆಗೆ ನಿರಂತರವಾದ ಒಡನಾಟವಿತ್ತು. ಅನಂತಕುಮಾರರ ಪ್ರೇರಣೆಯೊಂದಿಗೆ ರಾಜಕಾರಣದಲ್ಲಿ ಇವತ್ತಿಗೂ ಕೂಡ ಮುಂದುವರಿಯುತ್ತಿದ್ದೇನೆ ಎಂದು ಹೇಳಲು ನನಗೆ ಹೆಮ್ಮೆಯಿದೆ. ನಮ್ಮ ಅನಂತಕುಮಾರರ ಭೇಟಿ ಕೇವಲ ಮನವಿಪತ್ರ ಕೊಡುವುದಕ್ಕೆ ಅಥವಾ ಮಾತನಾಡಲು ಸೀಮಿತವಾಗುತ್ತಿರಲಿಲ್ಲ. ಪ್ರತಿ ಭೇಟಿಯಲ್ಲಿಯೂ ಅವರ ನಡವಳಿಕೆ ಮತ್ತು ಮಾತುಗಳ ಮೂಲಕ ಹೊಸತನ್ನು ಕಲಿಯುವ ಅವಕಾಶ ನಮಗೆ ದೊರೆಯುತ್ತಿತ್ತು. ಅವರ ಜೊತೆ ಮಾತನಾಡುವುದೆಂದರೆ, ಅದು ನೇತೃತ್ವದ ಪಾಠಶಾಲೆಯಲ್ಲಿ ಕುಳಿತಂತೆ.

ಅನಂತಕುಮಾರರು ಕಾರ್ಯಕರ್ತರನ್ನು ಸೂಕ್ಷ್ಮವಾಗಿ ಗಮನಿಸಿ ಅವರಿಗೆ ಸೂಕ್ತ ಮಾರ್ಗದರ್ಶನ ನೀಡಿ ಬೆಳೆಸುತ್ತಿದ್ದರು. 2012ರ ಲೋಕಸಭೆಯ ಉಪಚುನಾವಣೆಗೆ ನಾನು ಸ್ಪರ್ಧಿಸಿದ್ದೆ. ಆ ಚುನಾವಣೆಯಲ್ಲಿ ನಾನು ನಲವತ್ತು ಸಾವಿರ ಮತಗಳ ಅಂತರದಲ್ಲಿ ಸೋತಿದ್ದೆ. ಅಂತಿಮ ಸುತ್ತಿನಲ್ಲಿ ಸೋಲು ಖಚಿತ ಎಂದು ತಿಳಿದಿತ್ತು, ಚುನಾವಣೆಯ ಫಲಿತಾಂಶವು ಮಧ್ಯಾಹ್ನ ಒಂದು ಗಂಟೆಗೆ ಪ್ರಕಟವಾಗುವುದಿತ್ತು. ನಾನು ನನ್ನ ಮನೆಯಿಂದ ಬಿಜೆಪಿ ಕಚೇರಿಗೆ ಹೊರಟಿದ್ದೆ. ಚುನಾವಣೆಯಲ್ಲಿ ಸೋತ ಬೇಸರವು ಮನಸ್ಸಿನಲ್ಲಿತ್ತು. ಭವಿಷ್ಯವು ಕಾರ್ಮೋಡದಿಂದ ತುಂಬಿ ಮಸುಕಾಗಿತ್ತು. ದಾರಿಮಧ್ಯದಲ್ಲಿ ಅನಂತಕುಮಾರರು ನನಗೆ ಕರೆಮಾಡಿದರು. ಅನಂತಕುಮಾರರ ಕರೆ ಬಂದ ಕೂಡಲೇ ಏನೋ ಒಂದು ರೀತಿಯ ಸಮಾಧಾನ ದೊರೆಯಿತು. ಅವರು "ಎಲ್ಲಿದ್ದೀಯಾ" ಎಂದು ಕೇಳಿದರು. "ಪಕ್ಷದ ಕಛೇರಿಗೆ ಹೋಗ್ತಾ ಇದ್ದೇನೆ, ಸರ್" ಎಂದು ಹೇಳಿದೆ. "ಆಯ್ತು, ಬೆಂಗಳೂರಿಗೆ ಬಂದ ಮೇಲೆ ಸಿಗೋಣ ಮತ್ತು ಮಾತನಾಡೋಣ, ಆದರೆ ಇವತ್ತು ಕಛೇರಿಗೆ ಹೋದ ಮೇಲೆ ಪತ್ರಿಕೆಗಳಿಗೆ ಹೇಳಿಕೆ ಕೊಡಬೇಕಾದರೆ ಬಹಳ ಜಾಗ್ರತೆ ವಹಿಸು" ಎಂದಷ್ಟೇ ಹೇಳಿ ಫೋನ್ ಇಟ್ಟರು. ನನ್ನ ಮನೆಯಿಂದ ಪಕ್ಷದ ಕಛೇರಿಗೆ ಕೇವಲ ಹತ್ತು ನಿಮಿಷದ ದಾರಿ. ಅಲ್ಲಿಗೆ ತಲುಪುವ ತನಕ ನನಗೆ ಪತ್ರಿಕೆಯವರು ನನ್ನ ಬರುವಿಕೆಯನ್ನು ನಿರೀಕ್ಷಿಸುತ್ತಿದ್ದಾರೆ, ನಾನು ಅವರ ಜೊತೆ ಮಾತನಾಡಬೇಕಾಗುತ್ತದೆ ಎಂಬ ಕಲ್ಪನೆಯೂ ಇರಲಿಲ್ಲ. ಅನಂತಕುಮಾರರ ಕರೆ ನನಗೆ ಈ ಕುರಿತು ಯೋಚಿಸುವಂತೆ ಮಾಡಿತು. ನಂತರ ನಾನು ಯೋಚಿಸಿ ಮಾನಸಿಕ ಸಮತೋಲನದಿಂದ ಪತ್ರಿಕಾಹೇಳಿಕೆ ನೀಡಿದೆ. ಸೋಲಿನ ಸಂದರ್ಭದಲ್ಲಿ ಒಬ್ಬ ಕಾರ್ಯಕರ್ತನು ವಿಚಲಿತನಾಗಿ ಅನಗತ್ಯ ಹೇಳಿಕೆ ಕೊಡಬಾರದು ಎಂಬ ಬಗ್ಗೆ ಅನಂತಕುಮಾರರು ಪೂರ್ವಭಾವಿಯಾಗಿ ನನಗೆ ಎಚ್ಚರಿಸಿದ್ದ ಘಟನೆಯನ್ನು ನಾನು ಎಲ್ಲ ಸಂದರ್ಭಗಳಲ್ಲಿಯು ಸ್ಮರಿಸಿಕೊಳ್ಳುತ್ತೇನೆ. ಇದು ನಾನು ಅವರಿಂದ ಕಲಿತ ಪಾಠ. ಇಂದಿಗೂ ಪ್ರತಿಬಾರಿ ಪತ್ರಿಕಾಗೋಷ್ಠಿಗಳಲ್ಲಿ ಮಾತನಾಡುವಾಗ ಅನಂತಕುಮಾರ್ ನೆನಪಾಗುತ್ತಾರೆ.

ಅನಂತಕುಮಾರರಿಗೆ ಕಾರ್ಯಕರ್ತರನ್ನು ಗುರುತಿಸುವ, ಬೆಳೆಸುವ ಕೌಶಲ್ಯವಿತ್ತು. ಅವರು ವಿಶಾಲ ಮನೋಭಾವ ಹೊಂದಿದ್ದರು. ಅವರು ಯಾವಾಗಲೂ ಕಾರ್ಯಕರ್ತರ ಭವಿಷ್ಯದ ಕುರಿತು ಯೋಚಿಸುತ್ತಿದ್ದರು. ಒಮ್ಮೆ ಬೆಂಗಳೂರಿನಲ್ಲಿ ನಡೆದ ರಾಜ್ಯ ಪದಾಧಿಕಾರಿಗಳ ಸಭೆಯಲ್ಲಿ ನಾನು ಭಾಗವಹಿಸಿದ್ದೆ. ಮಧ್ಯಾಹ್ನದ ಊಟಕ್ಕಾಗಿ ನಾನು ಸಸ್ಯಾಹಾರಿಗಳ ಸಾಲಿನಲ್ಲಿ ನಿಂತಿದ್ದೆ. ಅದನ್ನು ನೋಡಿದ ಅನಂತಕುಮಾರರು "ಸಸ್ಯಾಹಾರಿಗಳ ಸಾಲಿನಲ್ಲಿ ನಿಂತಿದ್ದೀಯಲ್ಲ, ಏಕೆ?" ಎಂದು ಪ್ರಶ್ನಿಸಿದರು. "ನಾನು ಮಾಂಸಾಹಾರ ತ್ಯಜಿಸಿದ್ದೇನೆ" ಎಂದು ಉತ್ತರಿಸಿದೆ. ಆಗ ಅವರು "ಏನು ಮೂರ್ಖತನದ ಕೆಲಸ ಮಾಡುತ್ತಿರುವೆ, ನಿನ್ನನ್ನು ಹಿಂದುಳಿದ ನಾಯಕ ಎಂದು ಪರಿಗಣಿಸಬೇಕು ಎಂದು ನಾವೆಲ್ಲ ಪ್ರಯತ್ನಿಸುತ್ತಿದ್ದೇವೆ, ನೀನು ಮಾತ್ರ ಇಲ್ಲಿ ಸಸ್ಯಾಹಾರಿಗಳ ಸಾಲಿನಲ್ಲಿ ನಿಂತಿದ್ದೀಯಲ್ಲಪ್ಪಾ" ಎಂದು ಹೇಳಿ ನನ್ನನ್ನು ಮಾಂಸಾಹಾರಿಗಳ ಸಾಲಿಗೆ ಕಳಿಸಿದರು. ಜನರು ಆಹಾರ ಪದ್ಧತಿಯ ಮೇಲೆ ಗುರುತಿಸುತ್ತಾರೆ ಎಂಬುದು ಅವರ ಮಾತಿನ ತಾತ್ಪರ್ಯವಲ್ಲ, ನಮ್ಮನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡು ನಮ್ಮ ಭವಿಷ್ಯದ ರೂಪುರೇಷೆಗಳನ್ನು ನಿರ್ಧರಿಸುವ ಹೃದಯ ವೈಶಾಲ್ಯ ಅವರದಾಗಿತ್ತು. ನಾನು 2017ರಲ್ಲಿ ನನ್ನ ಕ್ಷೇತ್ರದ ಕೆಲಸಕ್ಕಾಗಿ ಅನಂತಕುಮಾರರನ್ನು ಭೇಟಿ ಮಾಡಲು ದೆಹಲಿಗೆ ಹೋದಾಗ ಅವರ ಕೆಲಸದ ಒತ್ತಡದಲ್ಲಿ ನನಗೆ ಮಾತಾಡಲು ಸಿಕ್ಕಿರಲಿಲ್ಲ. ಎರಡು ದಿನವಾದರೂ ಅವರು ಸಿಗಲಿಲ್ಲ ಎಂದು ಬೇಸರದಿಂದ ಊರಿಗೆ ಮರಳಲು ಟಿಕೆಟ್ ಖರೀದಿಸಿ ಸಿದ್ಧನಾಗಿದ್ದೆ. ರಾತ್ರಿ ಎರಡು ಗಂಟೆಗೆ ಅನಂತಕುಮಾರ್ ಕರೆ ಮಾಡಿ "ನಾನು ಎರಡು ದಿನ ಸಿಗಲಿಕ್ಕಾಗಲಿಲ್ಲ, ಬಂದ ಕೆಲಸವೇನು" ಎಂದು ವಿಚಾರಿಸಿದರು. ನಾನು ನನ್ನ ಕೆಲಸದ ಕಾರಣ ತಿಳಿಸಿದಾಗ ಮರುದಿನದ ಟಿಕೆಟ್ ರದ್ದು ಮಾಡಿ ಬೆಳಿಗ್ಗೆ 11 ಗಂಟೆಗೆ ಬಾ ಎಂದು ಕರೆದರು. ರಾತ್ರಿ 2 ಗಂಟೆಯ ವರೆಗೂ ಸಕ್ರಿಯರಾಗಿರುತ್ತಿದ್ದ ಅವರ ಕಾರ್ಯವೈಖರಿಗೆ ನಾನು ಬೆರಗಾಗಿದ್ದೆ. ಮರುದಿನ ನಾನು ಅವರ ಬಳಿಗೆ ಹೋದಾಗ ನನ್ನನ್ನು ನೇರವಾಗಿ ಕ್ರೀಡಾ ಸಚಿವರಾಗಿದ್ದ ಕಿರಣ್ ರಿಜಿಜು ಮತ್ತು ನಿತಿನ್ ಗಡ್ಕರಿ ಅವರ ಬಳಿಗೆ ಕರೆದುಕೊಂಡು ಹೋಗಿ ನನ್ನ ಕೆಲಸವನ್ನು ಮಾಡಿಸಿಕೊಟ್ಟರು. ಇದನ್ನು ನೆನೆಸಿಕೊಂಡರೆ ನಾನು ಇಂದಿಗೂ ಭಾವುಕನಾಗುತ್ತೇನೆ. ಅವರು ಅಂದು ಮಾಡಿದ ಸಹಾಯದಿಂದ ನನ್ನ ಕ್ಷೇತ್ರಗಳಲ್ಲಿ ಅನೇಕ ಕೆಲಸಗಳು ನಡೆಯುತ್ತಿವೆ. ನನ್ನ ಕ್ಷೇತ್ರದಲ್ಲಿ ನಿರ್ಮಾಣವಾಗುತ್ತಿರುವ ಕ್ರೀಡಾಂಗಣಕ್ಕೆ ಅನಂತಕುಮಾರರ ಹೆಸರನ್ನೇ ಇಡುತ್ತಿದ್ದೇವೆ.

ಅನಂತಕುಮಾರರು ಪ್ರತಿಯೊಂದು ಸಣ್ಣಪುಟ್ಟ ಸಂಗತಿಯನ್ನು ಗುರುತಿಸಿ ನಮ್ಮನ್ನು ಎಲ್ಲ ಹಂತಗಳಲ್ಲಿಯೂ ಬೆಳೆಸುತ್ತಿದ್ದರು. ನಾನು ಯುವ ಮೋರ್ಚಾ ರಾಜ್ಯಾಧ್ಯಕ್ಷನಾಗಿದ್ದ ಸಂದರ್ಭದಲ್ಲಿ ಪ್ರತಿಬಾರಿಯೂ ಯುವ ಮೋರ್ಚಾದ ಕಾರ್ಯಚಟುವಟಿಕೆಗಳ ಬಗ್ಗೆ ಅವರ ಹತ್ತಿರ ಸಲಹೆ ಕೇಳಲು ಹೋದಾಗ ಅವರು ಅನೇಕ ಸಲಹೆಗಳನ್ನು ಕೊಡುತ್ತಿದ್ದರು. ಅವರ ಜೊತೆ ಅನೌಪಚಾರಿಕವಾಗಿ ಮಾತನಾಡುವಾಗಲೇ ನಮಗೆ ಯುವ ಮೋರ್ಚಾದ ವಿಚಾರಗಳ ಮತ್ತು ಬೆಳವಣಿಗೆಯ ಕುರಿತು ಮಾರ್ಗದರ್ಶನ ದೊರೆಯುತ್ತಿತ್ತು. ಹೊಸತನ, ಗೆಳೆತನ, ಹೊಸನಾಯಕತ್ವಗಳೆಲ್ಲವಕ್ಕೂ ಒಂದು ಹೆಸರು ಸೂಚಿಸಬೇಕಾದರೆ ಅನಂತಕುಮಾರ್ ಎಂದು ನಿಸ್ಸಂಕೋಚವಾಗಿ ಹೇಳಬಹುದು. ಅವರು ಎಲ್ಲ ಸಂಗತಿಗಳಿಗೂ ಹೊಸತನವನ್ನು ಜೋಡಿಸುತ್ತಿದ್ದರು. ವಯಸ್ಸಿನ ಅಂತರವನ್ನು ಗಮನಿಸದೆ ಎಲ್ಲರ ಜೊತೆ ಸಲುಗೆಯಿಂದ ಮಾತನಾಡುತ್ತ ಹರಟೆ ಹೊಡೆಯುತ್ತಿದ್ದರು. ಇವತ್ತು ಕರ್ನಾಟಕವೂ ಸೇರಿದಂತೆ ಅನೇಕ ರಾಜ್ಯಗಳಲ್ಲಿ ಯುವನಾಯಕರ ದೊಡ್ಡ ಪಡೆ ಇದೆಯೆಂದರೆ ಅದರ ಹಿಂದೆ ಅನಂತಕುಮಾರರ ದೂರದರ್ಶಿತ್ವ ಮತ್ತು ಶ್ರಮವಿದೆ ಎಂದು ಧ್ವನಿಯೆತ್ತರಿಸಿ ಹೇಳಬಹುದು.

(ಪುಟ 5 ರಲ್ಲಿ ಮುಂದುವರೆದಿದೆ)



ಅನಂತಪಥ ಮಾಸಪತ್ರಿಕೆಯ 21 ನೇ ಸಂಚಿಕೆಯನ್ನು ಕರ್ನಾಟಕ ಸರ್ಕಾರದ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ ಶ್ರೀ ವಿ. ಸುನಿಲ್ ಕುಮಾರ್ ಅವರು 22 ಮಾರ್ಚ್ 2022 ರಂದು ಬಿಡುಗಡೆ ಮಾಡಿದರು.

# ಕಾಶ್ಮೀರದ ಪುನರುತ್ಥಾನ ಸಮಗ್ರ ದೇಶದ ಹೊಣೆ

- **ಆಶುತೋಷ್ ಭಟ್ನಾಗರ್** ನಿರ್ದೇಶಕರು, ಜಮ್ಮು-ಕಾಶ್ಮೀರ ಅಧ್ಯಯನ ಕೇಂದ್ರ



ಜಮ್ಮು- ಕಾಶ್ಮೀರದ ಸಮಸ್ಯೆಯು 1996 ರಿಂದ ಪ್ರಾರಂಭವಾದದ್ದಲ್ಲ; 1947 ರಲ್ಲಿ ದೇಶವಿಭಜನೆಯ ಹಂತದಲ್ಲಿಯೇ ಇದಕ್ಕೆ ಬೀಜಾಂಕುರವಾಗಿತ್ತು. ಇದನ್ನು ಸೂಕ್ಷ್ಮವಾಗಿ ಗಮನಿಸಿದ್ದ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತು ಕಾಶ್ಮೀರ ಸಮಸ್ಯೆಯನ್ನು ತನ್ನ ಪ್ರಮುಖ ಲಕ್ಷ್ಯವೆಂದು ಪರಿಗಣಿಸಿತ್ತು. ಇಂದಿಗೂ ಪರಿಷತ್ತಿನ ಯಾವ ಕಲಾಪಗಳೂ ಕಾಶ್ಮೀರ ಸಮಸ್ಯೆಯ ಪ್ರಸ್ತಾಪವಿಲ್ಲದೆ ಪೂರ್ಣಗೊಳ್ಳುವುದಿಲ್ಲ. ಇಂದು ಕಾಶ್ಮೀರಿ ಫೈಲ್ಸ್ ಚಲನಚಿತ್ರ ಬಿಡುಗಡೆಯಾದ ನಂತರ ಕಾಶ್ಮೀರದ ಸಮಸ್ಯೆಯು ದೇಶದಲ್ಲಿ ಎಲ್ಲ ಚರ್ಚೆಗಳ ಕೇಂದ್ರಬಿಂದುವಾಗಿ ಪರಿಣಮಿಸಿದೆ. ಎಲ್ಲ ಭಾರತೀಯರ ಮನಸ್ಸುಗಳನ್ನು ಕಲಕಿದೆ.

ಈ ಸಮಸ್ಯೆಗೆ 1990 ಕ್ಕಿಂತ ಬಹಳ ಮೊದಲೇ ಭೂಮಿಕೆ ಸಿದ್ಧವಾಗಿತ್ತು. 1983 ರಲ್ಲಿ ಏಕದಿನ ವಿಶ್ವಕಪ್ ವಿಜೇತ ಭಾರತದ ಕ್ರಿಕೆಟ್ ತಂಡವು ವೆಸ್ಟ್ ಇಂಡೀಸ್ ತಂಡದ ವಿರುದ್ಧ ಆಟವಾಡಲು ಶೇರ್-ಎ- ಕಾಶ್ಮೀರ್ ಕ್ರೀಡಾಂಗಣಕ್ಕೆ ಬಂದಿಳಿದಾಗ ಪ್ರತ್ಯೇಕತಾವಾದಿಗಳು ಭಾರತದ ವಿರುದ್ಧ ಮತ್ತು ಪಾಕಿಸ್ತಾನದ ಪರ ಘೋಷಣೆಗಳನ್ನು ಕೂಗಿದ್ದರು. 1986-87 ರಲ್ಲಿ ಭಾರತ ಮತ್ತು ಆಸ್ಟ್ರೇಲಿಯಾ ನಡುವೆ ಪಂದ್ಯ ನಡೆಯುತ್ತಿದ್ದಾಗ ಭೋಜನ ವಿರಾಮದ ವೇಳೆ ಪಿಚ್ಚನ್ನು ಗುದ್ದಲಿಯಿಂದ ಅಗೆದು ಹಾಳುಗೆಡವಿದ್ದರು. ಅಂದು ಬಂಧಿತರಾಗಿದ್ದ 12 ಜನ ಕಿಡಿಗೇಡಿಗಳು 2011 ರಲ್ಲಿ ಸಾಕ್ಷ್ಯಾಧಾರಗಳ ಕೊರತೆಯಿಂದ ಖುಲಾಸೆಗೊಂಡರು. ಸಾಕಷ್ಟು ಸೂಚನೆಗಳು ಮೊದಲೇ ಲಭ್ಯವಿದ್ದರೂ ಅವುಗಳ ಬಗ್ಗೆ ಅಂದಿನ ಕಾಶ್ಮೀರ ಸರಕಾರಗಳು ತಳೆದ ಉದಾಸೀನ ಪ್ರವೃತ್ತಿಯೇ ಪರಿಸ್ಥಿತಿ ಉಲ್ಬಣಗೊಳ್ಳಲು ಕಾರಣವಾಯಿತು.

1990ರ ಜನವರಿ 19 ಮತ್ತು 20 ರ ನಡುವಣ ರಾತ್ರಿ ನಡೆದ ನರಮೇಧದಿಂದ ಲಕ್ಷಾಂತರ ಹಿಂದೂಗಳು ತಮ್ಮ ದೇಶದಲ್ಲಿಯೇ ನಿರಾಶ್ರಿತರಾಗುವಂತಾಯಿತು. ಇಷ್ಟು ಗಂಭೀರವಾದ, ದಾರುಣ ಘಟನೆಯು ದೇಶದ ಇತರ ಭಾಗದ ಸಾಮಾನ್ಯ ಜನರಿಗೆ ತಿಳಿಯದಂತೆ ಕೇಂದ್ರ ಸರಕಾರ, ರಾಜ್ಯ ಸರಕಾರ ಮತ್ತು ಮಾಧ್ಯಮಗಳು ಎಚ್ಚರ ವಹಿಸಿದವು. ಹಿಂದೂಗಳ ವಿರುದ್ಧ ನಡೆದ ಕೋಮುಗಲಭೆಯನ್ನು ಹತ್ತಿಕ್ಕಲು ಕೇಂದ್ರ ಮತ್ತು ರಾಜ್ಯ ಸರಕಾರಗಳು ಉದ್ದೇಶಪೂರ್ವಕವಾಗಿ ಉದಾಸೀನ ತೋರಿದವು. ಕಾಶ್ಮೀರದಲ್ಲಿ ಹಿಂದೂಗಳ ಬದುಕು ದುಸ್ತರವಾಯಿತು. ಅವರಿಗೆ ಉದ್ಯೋಗಾವಕಾಶ ನಿರಾಕರಿಸಲಾಯಿತು. ಮಕ್ಕಳಿಗೆ ಶಾಲೆಗಳಲ್ಲಿ ಪ್ರವೇಶ ದೊರೆಯಲಿಲ್ಲ. ಇಂತಹ ದಾರುಣ ಪರಿಸ್ಥಿತಿಯಲ್ಲಿಯೂ ಸುಮಾರು ಒಂದು ಸಾವಿರ ಕುಟುಂಬಗಳು ಕಾಶ್ಮೀರವನ್ನು ತ್ಯಜಿಸಲಿಲ್ಲ. ಅಂತಹ ಧೀರರಲ್ಲಿ ವಿಶ್ವಹಿಂದೂ ಪರಿಷತ್ತಿನ ಜಮ್ಮು-ಕಾಶ್ಮೀರ ಘಟಕದ ಅಧ್ಯಕ್ಷರಾಗಿದ್ದ ಟಿ ಕೆ ಗಂಜೂ ಕೂಡ ಒಬ್ಬರು. ಅವರು ಭಯೋತ್ಪಾದಕ ಸಂಘಟನೆಯಾದ ಜೆಕೆಎಲ್ಎಫ್ ನಾಯಕ, ಯಾಸಿನ್ ಮಲ್ಲಿಕ್ ಮನೆಯ ಹಿಂಭಾಗದ ರಸ್ತೆಯಲ್ಲಿಯೇ ವಾಸಿಸಿದ್ದರು. ಅನಿವಾರ್ಯವಾಗಿ ಕಾಶ್ಮೀರ ಬಿಟ್ಟವರು ಕೂಡ ಜಮ್ಮುವಿನಲ್ಲಿ ನಿರಾಶ್ರಿತರ ನೆಲೆಗಳಲ್ಲಿ ನಿಂತು ಹೋರಾಟ ನಡೆಸಿದರು. ದೇಶ-ವಿದೇಶಗಳಲ್ಲಿ ಚದುರಿ ಹೋಗಿರುವ ಕಾಶ್ಮೀರಿ ಹಿಂದೂಗಳು ತಮ್ಮ ನೆಲೆಗೆ ಮರಳುವ ಆಸೆಯನ್ನು ಇಂದಿಗೂ ಜೀವಂತವಾಗಿರಿಸಿಕೊಂಡಿದ್ದಾರೆ. ಇವರೆಲ್ಲರ ಹೋರಾಟಕ್ಕೆ ಇಂದು ಒಂದು ಹಂತದ ವಿಜಯ ದೊರೆತಿದೆ.

ಒಂದು ಸಾವಿರ ವರ್ಷಗಳಿಗೂ ಹೆಚ್ಚು ಕಾಲ ಕಾಶ್ಮೀರವು ಭಾರತದ ಸಾಂಸ್ಕೃತಿಕ ಇತಿಹಾಸದ ನಿರ್ಮಾಣ ಮತ್ತು ವಿಸ್ತರಣೆಯಲ್ಲಿ ಮಹತ್ವದ ಪಾತ್ರ ವಹಿಸಿದೆ. ಲೋಹಶಾಸ್ತ್ರ, ಕಲೆ, ಸಾಹಿತ್ಯ, ವಿಜ್ಞಾನ, ತತ್ತ್ವಜ್ಞಾನ ಮುಂತಾದ ಎಲ್ಲ ಜ್ಞಾನಗಳ ಸಂಗಮ ಈ ಕಾಶ್ಮೀರ. ಇದು ಕೇವಲ ಒಂದು ಭೂಮಿಯ ತುಣುಕಲ್ಲ. ಕಾಶ್ಮೀರವಿಲ್ಲದ ಭಾರತ ಅಪೂರ್ಣವಾಗುತ್ತದೆ. ಇಂತಹ ಕಾಶ್ಮೀರವು ಭಾರತದ ಕೈ ಬಿಟ್ಟು ಹೋಗುತ್ತಿದೆ ಎಂದು ಅನ್ನಿಸಿದ ಕ್ಷಣದಲ್ಲಿಯೂ ಜಮ್ಮು-ಕಾಶ್ಮೀರಗಳ ಜನರ ಛಲ ಮತ್ತು ಹೋರಾಟಗಳ ಫಲವಾಗಿ ಇಂದಿಗೂ ಇದು ಭಾರತದ ಅಂಗವಾಗಿ ಉಳಿದುಕೊಂಡಿದೆ. ಇಂದು ಕಾಶ್ಮೀರದ ಜನತೆಯ ಹೋರಾಟವನ್ನು, ಕಾಶ್ಮೀರದ ಸಂಸ್ಕೃತಿಯನ್ನು ಇಡೀ ದೇಶದ ಜನರು ಬೆಂಬಲಿಸುತ್ತಿದ್ದಾರೆ. ಇದರಿಂದಾಗಿ, ಪಾಕಿಸ್ತಾನದ ವಶದಲ್ಲಿರುವ ಕಾಶ್ಮೀರವು ಭಾರತಕ್ಕೆ ಸೇರುವುದೆಂಬ ಭರವಸೆ ಮೂಡುತ್ತಿದೆ.

ಸಂವಿಧಾನದ 370 ನೇ ವಿಧಿಯ ರದ್ದತಿಯ ನಂತರ ಕಾಶ್ಮೀರದಲ್ಲಿ ರಾಷ್ಟ್ರೀಯ ವಿಚಾರದ ಚಿಂತನೆಗಳು ಬಲವಾಗುತ್ತಿವೆ. ಜನರ ಆತ್ಮವಿಶ್ವಾಸ ಹೆಚ್ಚಿದೆ. ರಾಜ್ಯ ಪ್ರಗತಿಯತ್ತ ನಡೆಯುತ್ತಿದೆ. ಸಂವಿಧಾನದ 370 ಮತ್ತು 35ಎ ವಿಧಿಗಳು ಹಾಗೂ 1954ರ ರಾಷ್ಟ್ರಪತಿ ಆದೇಶಗಳ ರದ್ದತಿಯ ನಂತರ ದೇಶದ ಸಂವಿಧಾನದ ಪ್ರಯೋಜನಗಳು ಕಾಶ್ಮೀರದ ಜನತೆಗೂ ಲಭಿಸುತ್ತಿವೆ. ದೇಶದ ಎಲ್ಲ ಕಾನೂನುಗಳೂ ಕಾಶ್ಮೀರಕ್ಕೂ ಅನ್ವಯಿಸುತ್ತಿವೆ. ಕಾಶ್ಮೀರದ ಎಲ್ಲ ನಾಗರಿಕರಿಗೂ ಸಮಾನ ಅಧಿಕಾರ ದೊರೆತಿದೆ. ಹೀಗೆಂದ ಮಾತ್ರಕ್ಕೆ ಕಾಶ್ಮೀರಿ ಹಿಂದೂಗಳು ಮರಳಲು ಕಾಲ ಪ್ರಶಸ್ತವಾಗಿದೆ ಎಂದು ಭಾವಿಸಬಾರದು. ಇಂದು ಕಾಶ್ಮೀರದಲ್ಲಿ ಬೆರಳೆಣಿಕೆಯಷ್ಟು ಮಾತ್ರ ಪ್ರತ್ಯೇಕತಾವಾದಿಗಳು ಉಳಿದುಕೊಂಡಿದ್ದಾರೆ. ಬಹುತೇಕ ಎಲ್ಲರೂ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ವಾಸ್ತವವನ್ನು ಸ್ವೀಕರಿಸಿದ್ದಾರೆ. ಇದಕ್ಕೊಂದು ಚಿಕ್ಕ ಉದಾಹರಣೆ, ಇತ್ತೀಚೆಗೆ ಶ್ರೀನಗರದಲ್ಲಿ ನಡೆದ ತಿರಂಗಾಯಾತ್ರೆ. ಇದರಲ್ಲಿ ಅಂದು ಸಾವಿರಾರು ಜನರು ಭಾರತದ ತ್ರಿವರ್ಣ ಧ್ವಜವನ್ನು ಹಿಡಿದು ಶ್ರೀನಗರದ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ಕಾಶ್ಮೀರವು ಭಾರತದ ಅಭಿನ್ನ ಅಂಗ, ಇದು ಅಂತಿಮ ಎಂಬುದನ್ನು ಜನರು ಒಪ್ಪಿಕೊಂಡಿದ್ದಾರೆ.

ಕಾಶ್ಮೀರದ ಸಮಸ್ಯೆ ಇಷ್ಟೆಲ್ಲ ಬಿಗಡಾಯಿಸಲು ಸಂವಿಧಾನದ 370ನೇ ವಿಧಿ ಮತ್ತು ಅದರ ದುರುಪಯೋಗಗಳು ಕಾರಣ. ಈ ವಿಧಿಯ ನೆಪದಲ್ಲಿ ಅದರಲ್ಲಿಲ್ಲದ ವಿಚಾರಗಳ ಭ್ರಮಾಜಾಲವನ್ನು ಕಾಶ್ಮೀರದ ರಾಜಕಾರಣಿಗಳು ಸೃಷ್ಟಿಸಿದರು. ಕೇವಲ ಮೂರು ನಾಲ್ಕು ಕುಟುಂಬಗಳು ತಮ್ಮ ಸ್ವಾರ್ಥ ಸಾಧನೆಗಾಗಿ ಜನರನ್ನು ಅಂಧಕಾರದಲ್ಲಿರಿಸಿದವು. ಇನ್ನು ಮುಂದೆ ಈ ಪರಿವಾರಗಳು ಅಧಿಕಾರಕ್ಕೆ ಮರಳುವ ಸಾಧ್ಯತೆಗಳಿಲ್ಲ. ಇತ್ತೀಚೆಗೆ ನಡೆದ ಪಂಚಾಯತಿ ಚುನಾವಣೆಗಳಲ್ಲಿ ಹೊಸಪೀಳಿಗೆಯ ಯುವಕರು ವಿಜಯ ಗಳಿಸಿ ನಾಯಕತ್ವ ವಹಿಸಿಕೊಂಡಿದ್ದಾರೆ. ಈ ನಾಯಕತ್ವ ಗ್ರಾಮಗಳಿಂದ ಮುನ್ನೆಲೆಗೆ ಬಂದಿದೆ. ನಿಂತ ನೀರಾಗಿದ್ದ, ಕೊಳೆತು ನಾರುತ್ತಿದ್ದ ರಾಜಕೀಯಕ್ಕೆ ಮುಕ್ತಾಯ ಹಾಕಲಾಗಿದೆ. ಪರಿಸ್ಥಿತಿ ಸಹಜತೆಗೆ ಮರಳುತ್ತಿದೆ. ಇಂದಲ್ಲ ನಾಳೆ, ನೆಲೆ ಕಳೆದುಕೊಂಡ ಹಿಂದೂಗಳು ಕಣಿವೆಗೆ ಮರಳುವ ಭರವಸೆ ಮೂಡುತ್ತಿದೆ.

ವ್ಯವಸ್ಥೆಯಲ್ಲಿ ಸುಧಾರಣೆಯಾಗುತ್ತಿರುವಂತೆ ಸುಮಾರು ಆರರಿಂದ ಏಳು ಸಾವಿರ ಜನರು ಕಾಶ್ಮೀರಕ್ಕೆ ಮರಳಿದ್ದಾರೆ. ಉಳಿದವರೂ ಮರಳುವಂತಾಗಲು ಪ್ರಶಸ್ತವಾದ ವಾತಾವರಣ ನಿರ್ಮಾಣವಾಗಬೇಕಾಗಿದೆ. ತಾಂತ್ರಿಕ ಮತ್ತು ವೈದ್ಯಕೀಯ ಕಾಲೇಜುಗಳು ಪ್ರಾರಂಭವಾಗಬೇಕು. ತಂತ್ರಾಂಶ ಮತ್ತು ಯಂತ್ರಾಂಶ ಉದ್ಯಮಗಳು ಕಣಿವೆಯನ್ನು ಪ್ರವೇಶಿಸಬೇಕು. ಜನರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸುವ ಖಾಸಗಿ ಹೂಡಿಕೆಗಳು ನಡೆಯಬೇಕು. ನಿಧಾನವಾಗಿಯಾದರೂ ಇವೆಲ್ಲ ನಡೆಯುತ್ತಿವೆ.

ಕಾಶ್ಮೀರದ ಮೇಲೆ ಪಾಕಿಸ್ತಾನವು ಆಕ್ರಮಣ ಮಾಡಿದ್ದರೆ, ಕಾಶ್ಮೀರದಲ್ಲಿ ಭಯೋತ್ಪಾದಕ ಚಟುವಟಿಕೆಗಳು ನಡೆಯುತ್ತಿದ್ದರೆ, ಅವೆಲ್ಲವೂ ಕಾಶ್ಮೀರಿಗಳ ವಿರುದ್ಧವಲ್ಲ; ಭಾರತದ ವಿರುದ್ಧ ಎಂದು ತಿಳಿಯಬೇಕು. ಕಾಶ್ಮೀರದ ಪುನರುತ್ಥಾನವು ಇಡೀ ಭಾರತದ ಜವಾಬ್ದಾರಿಯಾಗಿದೆ. ಕಾಶ್ಮೀರದಲ್ಲಿ ಹಿಂದೂಗಳು ಸನ್ಮಾನಪೂರ್ವಕವಾಗಿ, ಸ್ವಾಭಿಮಾನದಿಂದ ಬದುಕುವ ವಾತಾವರಣ ನಿರ್ಮಾಣವಾಗಬೇಕೆಂದು ಸರಸಂಘಚಾಲಕ ಶ್ರೀ ಮೋಹನ್ ಭಾಗವತ್ ಇತ್ತೀಚೆಗೆ ಕರೆ ನೀಡಿದ್ದಾರೆ. ಕಣಿವೆಯಲ್ಲಿ ಹಿಂದೂಗಳ ಸಂಖ್ಯೆ ಹೆಚ್ಚುತ್ತಿದೆ; ಇಂದು ಸುಮಾರು ಹತ್ತು ಸಾವಿರ ಹಿಂದೂಗಳು ಕಾಶ್ಮೀರದಲ್ಲಿ ನೆಲೆಸಿದ್ದಾರೆ.

ನಾವಿಂದು ಜಗತ್ತಿನ ಕಣ್ಣಲ್ಲಿ ಕಣ್ಣಿಟ್ಟು ನೋಡುವ 2022ರ ಸಮರ್ಥ ಭಾರತದಲ್ಲಿ ಇದ್ದೇವೆ. ಭಾರತವು ಜಗತ್ತಿನ ಶಕ್ತಿಶಾಲಿ ದೇಶವಾಗಿ ಹೊರಹೊಮ್ಮಿದೆ. ಇದು ಭಾರತದ ಸಮಯ. ಆಕ್ರಮಿತ ಕಾಶ್ಮೀರವು ಮರಳಿ ಬರುವಂತೆ ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಲು ಪರಿಸ್ಥಿತಿ ಅನುಕೂಲಕರವಾಗಿದೆ. ಭಾರತೀಯರು ಕಾಶ್ಮೀರದಲ್ಲಿ ಯಂತ್ರಾಂಶ, ಪುಷ್ಪ ಕೃಷಿ, ಆಹಾರ ಸಂಸ್ಕರಣೆ, ಕೃಷಿ, ಗುಡಿಕೈಗಾರಿಕೆಗಳು, ಶಿಕ್ಷಣ ಮುಂತಾದ ಕ್ಷೇತ್ರಗಳಲ್ಲಿ ಹೂಡಿಕೆ ಮಾಡಬೇಕು. ಸ್ವಸಹಾಯ ಸಂಘಗಳನ್ನು ಸ್ಥಾಪಿಸಲು ಪರಿಣತರು ಮಾರ್ಗದರ್ಶನ ನೀಡಬೇಕು. (ಪುಟ 4 ರಲ್ಲಿ ಮುಂದುವರೆದಿದೆ)

**(8ನೇ ಆವೃತ್ತಿಯ 'ದೇಶ ಮೊದಲು' ವೆಬಿನಾರ್ ಸಂವಾದದ ಭಾಷಣದ ಸಂಗ್ರಹರೂಪ)**

## (ಪುಟ 1 ರಿಂದ) ಕಾಶ್ಮೀರ, ಕರ್ನಾಟಕ ಮತ್ತು ಅನಂತಕುಮಾರ್

ಕಾಶ್ಮೀರಿಗಳ ಮನವಿಯನ್ನು ಪುರಸ್ಕರಿಸಿದ ಮುಖ್ಯಮಂತ್ರಿಗಳು 2003 ರಲ್ಲಿ ಕಾಶ್ಮೀರ ಭವನ ಸ್ಥಾಪನೆಗೆ ನಿವೇಶನವೊಂದನ್ನು ಮಂಜೂರು ಮಾಡಿದರು. ಅನಂತಕುಮಾರರು ತಮ್ಮ ಸಂಸದರ ನಿಧಿಯಿಂದ ಅನುದಾನವನ್ನೂ ನೀಡಿದರು. ಕಾಶ್ಮೀರ ಸಮಸ್ಯೆಯು ಸ್ಥಳೀಯವಾದದ್ದು, ಕಾಶ್ಮೀರಿಗಳೇ ಸ್ವಯಿಚ್ಛೆಯಿಂದ ಕಣಿವೆ ತ್ಯಜಿಸಿ ಹೋದರು, ಕಾಶ್ಮೀರದ ಸಮಸ್ಯೆ ಕೇವಲ ಕೆಲವು ಬ್ರಾಹ್ಮಣ ಕುಟುಂಬಗಳ ಸಮಸ್ಯೆ ಎನ್ನುವ ಮಹಾನುಭಾವರಿಗೆ ಮುಂದಿನ ಬೆಳವಣಿಗೆಗಳು ಉತ್ತರವಾಗಬಲ್ಲವು. "ಕಾಶ್ಮೀರವು ಇಸ್ಲಾಮಿಕ್ ರಾಜ್ಯ, ಇಲ್ಲಿ ಮುಸ್ಲಿಮೇತರರಿಗೆ ಸ್ಥಾನವಿಲ್ಲ" ಎಂದು ದೌರ್ಜನ್ಯವೆಸಗಿದ ಮತಾಂಧ ಮುಸ್ಲಿಮರ ಸಂಪರ್ಕಜಾಲ ಎಲ್ಲೆಡೆ ಹರಡಿತ್ತು. ಅವರಿಗೆ ಬೆಂಬಲ ನೀಡಲು ಬುದ್ಧಿಜೀವಿಗಳ ಒಂದು ವರ್ಗ ಸದಾ ಸಿದ್ಧವಿತ್ತು. ಬೆಂಗಳೂರಿನಲ್ಲಿ ನೆಲೆಸಿದ್ದ ಕಾಶ್ಮೀರಿ ಹಿಂದೂಗಳ ಮೇಲೆಯೂ ಅವರು ಕಣ್ಣಿಟ್ಟಿದ್ದರು. ಕಾಶ್ಮೀರ ಭವನಕ್ಕೆ ಮಂಜೂರಾದ ನಿವೇಶನವಂತೂ ಮುಸ್ಲಿಂ ಬಾಹುಳ್ಯವಿರುವ ತಿಲಕನಗರದಲ್ಲಿತ್ತು. ಮುಸ್ಲಿಮರ ಏರಿಯಾದಲ್ಲಿ ಕಾಶ್ಮೀರಿ ಹಿಂದೂಗಳಿಗೆ ನಿವೇಶನ ನೀಡಿದ್ದೇ ಅಕ್ರಮ, ಇದರಿಂದ ಸಾಮಾಜಿಕ ಸಾಮರಸ್ಯ ಹದಗೆಡುತ್ತದೆ ಎಂದು ವಿತಂಡವಾದ ಮಂಡಿಸಿ ನ್ಯಾಯಾಲಯದ ಕಟಕಟೆ ಹತ್ತಿದರು. ಪ್ರತಿಹಂತದಲ್ಲಿಯೂ ತಮಗೆ ಸೋಲಾದರೂ ವಿವಾದವನ್ನು ಸರ್ವೋಚ್ಚ ನ್ಯಾಯಾಲಯದ ವರೆಗೂ ಕೊಂಡೊಯ್ದರು. ಎಂಟು ವರ್ಷಗಳ ಕಾನೂನು ಹೋರಾಟದ ನಂತರ ಸುಪ್ರೀಂ ಕೋರ್ಟಿನ ಆದೇಶ ಕಾಶ್ಮೀರಿಗಳ ಪರವಾಗಿ ಬಂದಿತು.

ನಿರ್ಮಾಣದ ಹಂತದಲ್ಲೂ ಅನೇಕ ಅಡಚಣೆಗಳಾದವು. ಅನಂತಕುಮಾರ್ ಮತ್ತು ಶಾಸಕರಾದ ವಿಜಯಕುಮಾರ್ ಎಲ್ಲ ಹಂತದಲ್ಲಿಯು ಕಾಶ್ಮೀರಿ ಹಿಂದೂಗಳಿಗೆ ಬೆಂಬಲ ಸೂಚಿಸಿ ರಕ್ಷಣೆ ನೀಡಿದರು. ಈ ಸಂದರ್ಭದಲ್ಲಿ ನೆರವಿಗೆ ಬಂದದ್ದು, ರಾಷ್ಟ್ರೀಯ ಸ್ವಯಂ ಸೇವಕ ಸಂಘ ಮತ್ತು ಹಿಂದೂ ಜಾಗರಣ ವೇದಿಕೆ. ಇವೆರಡೂ ಸಂಸ್ಥೆಗಳು ಅರೆಸುಟ್ಟ ಭವನದ ಎದುರಿಗೇ ಸಮಾರಂಭವೊಂದನ್ನು ಏರ್ಪಡಿಸಿ ಭವನದ ನಿರ್ಮಾಣಕ್ಕೆ ತಮ್ಮ ಬೆಂಬಲವನ್ನು ಸಾರ್ವಜನಿಕವಾಗಿ ಘೋಷಿಸಿದವು. ಕಾರ್ಯಕರ್ತರು ಸ್ಥಳೀಯ ಹಿಂದೂಗಳನ್ನು ವೈಯಕ್ತಿಕವಾಗಿ ಭೇಟಿಯಾಗಿ ಕಾಶ್ಮೀರಿ ಪಂಡಿತರ ಮೇಲೆ ಮುಸ್ಲಿಮರು ಎಸಗಿದ ದೌರ್ಜನ್ಯವನ್ನು ವಿವರಿಸಿ ಅವರ ಬೆಂಬಲವೂ ಪಂಡಿತರಿಗೆ ದೊರಕುವಂತೆ ಮಾಡಿದರು.

ಈ ರೀತಿಯಾಗಿ ದೊರೆತ ಅಭೂತಪೂರ್ವ ಬೆಂಬಲದಿಂದ ಕಾಶ್ಮೀರ ಭವನದ ನಿರ್ಮಾಣವು ವೇಗ ಗಳಿಸಿಕೊಂಡು 2013 ರಲ್ಲಿ ಪೂರ್ಣಗೊಂಡಿತು. ಉದ್ಘಾಟನೆಯ ದಿನ ನಡೆದ ಧಾರ್ಮಿಕ ಕಾರ್ಯಕ್ರಮಗಳನ್ನು ಶ್ರೀ ಅನಂತಕುಮಾರ್ ದಂಪತಿಗಳೇ ನೆರವೇರಿಸಿದರು. ಶ್ರೀ ಎಸ್. ಎಂ. ಕೃಷ್ಣ, ಬಿ. ಎನ್. ವಿಜಯಕುಮಾರ್, ಆರ್. ಕೆ. ಮಟ್ಟೂ ಮುಂತಾದ ಗಣ್ಯರು ಸಮಾರಂಭದಲ್ಲಿ ಭಾಗವಹಿಸಿದ್ದರು. ಅಂದು ಅವರು ಮಾಡಿದ ಭಾಷಣದ ಸಾರಾಂಶ ಇಲ್ಲಿದೆ.

ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಕೆಲಸ ಮಾಡುತ್ತಿದ್ದ ಆರ್ ಕೆ ಮಟ್ಟೂ ಅವರನ್ನು ನಾನು ಅಭಾವಿಪ ಕಾರ್ಯಕರ್ತನಾಗಿ ಅನೇಕ ಬಾರಿ ಭೇಟಿಯಾಗುತ್ತಿದ್ದೆ. ಅವರು ತಮ್ಮ ವೈಯಕ್ತಿಕ ಹಿತಾಸಕ್ತಿಗಿಂತ ಮಿಗಿಲಾಗಿ ಕಾಶ್ಮೀರದ ವಲಸಿಗರ ಯೋಗಕ್ಷೇಮದ ಕುರಿತು ಕೆಲಸ ಮಾಡಿದ್ದಾರೆ. ಇಂದು ಉದ್ಘಾಟನೆಯಾಗುತ್ತಿರುವ ಈ ಭವನ ಕಾಶ್ಮೀರ ಭವನವಲ್ಲ, ಇದು ಭಾರತ ಭವನ. ದೇಶದಲ್ಲಿರುವ ಅನೇಕ ಸಂಸ್ಕೃತಿ ಭವನ, ಪ್ರವಾಸೋದ್ಯಮ ಭವನಗಳಿಗಿಂತ ಉತ್ತಮವಾಗಿ ಈ ಭವನವನ್ನು ನಿರ್ಮಿಸಿದ್ದಾರೆ.

ಕಾಶ್ಮೀರ ಆಂದೋಲನದಿಂದಲೇ ರಾಜಕೀಯಕ್ಕೆ ಕಾಲಿಟ್ಟವರು ಡಾ. ಶ್ಯಾಮಾಪ್ರಸಾದ್ ಮುಖರ್ಜಿ. ನಾನು ಮುಖರ್ಜಿಯವರ ವಿಚಾರಧಾರೆಯಿಂದ ಆಕರ್ಷಿತನಾದವನು. "ಏಕ್ ದೇಶ್ ಮೇ ದೋ ನಿಶಾನ್, ದೋ ವಿಧಾನ್, ದೋ ಪ್ರಧಾನ್ ನಹೀ ಚಲೇಂಗೆ " ಎಂದು ಗುಡುಗಿದ ಅವರ ಮಾತುಗಳೇ ನಮಗೆ ವೇದವಾಕ್ಯವಾಗಿದೆ. ಕಾಶ್ಮೀರವು ಭಾರತದ ಅವಿಭಾಜ್ಯ ಅಂಗ ಎಂದು 1993 ರಲ್ಲಿಯೇ ಸಂಸತ್ತಿನ ಉಭಯ ಸದನಗಳಲ್ಲಿ ನಿರ್ಣಯ ತೆಗೆದುಕೊಳ್ಳಲಾಗಿತ್ತು.

ನನ್ನ ಪತ್ನಿ ಯಾವಾಗಲೂ "ನಿಮ್ಮ ಜೀವನದ ಅತೀ ದೊಡ್ಡ ಕನಸು ಯಾವುದು?" ಎಂದು ಕೇಳುತ್ತಿರುತ್ತಾರೆ. ಅವರಿಗೆ ನಾನು ಈ ವೇದಿಕೆಯಿಂದ ಕೊಡಬಹುದಾದ ಉತ್ತರ: "ಹುಣ್ಣಿಮೆಯ ಬೆಳದಿಂಗಳ ರಾತ್ರಿ, ನನ್ನ ಪತ್ನಿಯ ಜೊತೆ ಕುಳಿತು ಪಾಕ್ ಆಕ್ರಮಿತ ಕಾಶ್ಮೀರದ ಗಿಲ್ಗಿಟ್ ನಲ್ಲಿ ಸಾಕಿಯಾ (ಕಾಶ್ಮೀರಿ ಪಾನೀಯ) ಸವಿಯುತ್ತಾ ಕೂಡಬೇಕು ಎಂದಾಗ ವೇದಿಕೆಯಲ್ಲಿದ್ದ ಎಸ್. ಎಂ. ಕೃಷ್ಣ ಅವರು ಹಾಸ್ಯ ಭಾವದಿಂದ "ಏನು ನಿಮ್ಮ ಮನೆಯವರನ್ನು ಅಷ್ಟೇ ಕರೆದುಕೊಂಡು ಹೋಗ್ತಿರಾ ನಾವು ಬರೋದು ಬೇಡ್ವಾ" ಎಂದಾಗ ಅದಕ್ಕೆ ನೀವು ಮತ್ತು ಎದುರುಗಡೆ ಕೂತಿರುವರು ನಾವೆಲ್ಲರೂ ಹೋಗುವಂತಾಗಲಿ ಅದೇ ನನ್ನ ಕನಸು ಎಂದು ಹೇಳಿದರು.

ಆಕ್ರಮಿತ ಕಾಶ್ಮೀರದ ನೆಲದಲ್ಲಿ ಭಾರತದ ಧ್ವಜ ಹಾರಾಡುವ ದಿನ ದೂರವಿಲ್ಲ. ಆದರೆ ಅಲ್ಲಿನ ಬೆಳದಿಂಗಳನ್ನು ಆಸ್ವಾದಿಸಲು ಅನಂತಕುಮಾರ್ ನಮ್ಮೊಂದಿಗಿಲ್ಲ. ★

## (ಪುಟ 3 ರಿಂದ) ಕಾಶ್ಮೀರದ ಪುನರುತ್ಥಾನ

ಇಂದು ಕಾಶ್ಮೀರದಲ್ಲಿರುವುದು 1996ರ ನಂತರದ ಹೊಸಪೀಳಿಗೆ. ಅವರಿಗೆ ಕಾಶ್ಮೀರದ ಚರಿತ್ರೆಯ ಬಗ್ಗೆ ಮಾಹಿತಿ ಇಲ್ಲ. ಕಾಶ್ಮೀರದಲ್ಲಿ ಮುಸ್ಲಿಮೇತರರು ಇದ್ದಿದ್ದರು ಎಂಬ ಮಾಹಿತಿಯೂ ಅವರಿಗಿಲ್ಲ. ಹಿಂದೂಗಳ ಜೀವನ ಪದ್ಧತಿಯ ಪರಿಚಯ ಅವರಿಗಿಲ್ಲ. ಈ ಬಗ್ಗೆ ಅವರಿಗೆ ತಿಳುವಳಿಕೆ ನೀಡುವ ಕೆಲಸ ನಡೆಯಬೇಕು. ಸಾಂಸ್ಕೃತಿಕ ಕಾಶ್ಮೀರದ ಪುನರ್ನಿರ್ಮಾಣದ ಕಾರ್ಯ ಈಗಾಗಲೇ ಪ್ರಾರಂಭವಾಗಿದೆ. ಕಳೆದ ಐದಾರು ವರ್ಷಗಳಲ್ಲಿ 26 ದೇವಾಲಯಗಳ ಪುನರ್ನಿರ್ಮಾಣವಾಗಿದೆ. ಆ ದೇವಾಲಯಗಳಲ್ಲಿ ನಿತ್ಯ ಪೂಜೆ ನಡೆಯುತ್ತಿದೆ. ಈ ವರ್ಷದ ಕೀರ್ ಭವಾನಿ ಜಾತ್ರೆಯಲ್ಲಿ ಸುಮಾರು 25 ಸಾವಿರ ಜನರು ಭಾಗವಹಿಸಿದ್ದರು. ಕಿಶನ್ ಗಂಗಾ ನದಿಯ ದಡದಲ್ಲಿ ಶಾರದಾಮಾತೆಯ ದೇಗುಲದ ನಿರ್ಮಾಣ ಪ್ರಾರಂಭವಾಗಿದೆ. ಕಿಶನ್ ಗಂಗಾ ನದಿಯಲ್ಲಿ ಸ್ನಾನ ಮಾಡಿ ಪ್ರಾರಂಭವಾಗುವ ಶಾರದಾ ಯಾತ್ರೆ ನಡೆಯುತ್ತಿದೆ. ವಿದ್ಯಾರ್ಥಿಗಳು ಮತ್ತು ಯುವಕರ ನಡುವೆ ಸಾಂಸ್ಕೃತಿಕ ವಿನಿಮಯಗಳ ಪ್ರಯತ್ನ ನಡೆಯುತ್ತಿದೆ. ಈ ದಿಸೆಯಲ್ಲಿ ಜಮ್ಮು-ಕಾಶ್ಮೀರ ಅಧ್ಯಯನ ಕೇಂದ್ರವು ಹಲವಾರು ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಇಂತಹ ಕಾರ್ಯಕ್ರಮಗಳಲ್ಲಿ ಕೈಜೋಡಿಸಲು ಬಯಸುವ ಜನರಿಗೆ ಸಹಕಾರವನ್ನು ಜಮ್ಮು-ಕಾಶ್ಮೀರ ಅಧ್ಯಯನ ಕೇಂದ್ರ ನೀಡುತ್ತಿದೆ ★

ಅನಂತಪಥ

ಅನಂತಪಥ ಮಾಸಪತ್ರಿಕೆಯು ಪ್ರತಿ ತಿಂಗಳ 22ನೆಯ ತಾರೀಕು ತಪ್ಪದೆ ಪ್ರಕಟವಾಗುತ್ತಿದೆ. ಈ ಪತ್ರಿಕೆಯ ಚಂದಾದಾರರಾಗಿ ಅನಂತಕುಮಾರ್ ಪ್ರತಿಷ್ಠಾನದ ಸೇವಾಚಟುವಟಿಕೆಗಳನ್ನು ಪ್ರೋತ್ಸಾಹಿಸಿ.

ರೂ. 1000 ನೀಡಿ ಚಂದಾದಾರರಾಗಲು ಮತ್ತು ಇತರ ವಿವರಗಳಿಗೆ ಈ ದೂರವಾಣಿ ಸಂಖ್ಯೆಯನ್ನು ಸಂಪರ್ಕಿಸಿ: 8884182415

ಅನಂತಪಥ

Editor: **Gopal T.S** I Assistance: **K. Janardhana Thunga** I Layout: **Ananthakumar Pratishthana**
**Assistance: Sanjay R / Trivikram Joshi** Sketch: **Raghupathi Sringeri**
Inputs: **Poornaprajna I Sreelakshmi Vishwanath I Chaya Bapat I Srikanth K I Pradeep Oak I Keshava Prasad I B K Ranganath**

Photographs: **Ananthakumar Pratishthana I Adamya Chethana I Gopal TS I Internet Sources** Printed at: **Rashtrothana Mudranalaya, Chamrajpet, Bengaluru**
Published by: **Dr. Tejaswini Ananthkumar**

For-AnanthKumar Pratishthana # 12, Sumeru, M N Krishna Rao Road, Basavanagudi, Bangalore-04
Ph: 080 26568484 I Email: ananth.path@akp.org.in

ಸ್ಪಷ್ಟನೆ: ಅನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು:ಈ ಪತ್ರ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.

ಸೂಚನೆ: ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು: ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ
To get a e-version of this periodical SMS your name and place to 8884182415

# ಬಂಧನದ ಕಷ್ಟದಲ್ಲೂ ಕುಗ್ಗದ ಜೀವನೋತ್ಸಾಹ



ಸದಾ ಹಸಮ್ಮುಖಿಯಾಗಿದ್ದ ಅನಂತಕುಮಾರ್ ಉತ್ಸಾಹಶೀಲರಷ್ಟೇ ಅಲ್ಲ, ಪರಿಸ್ಥಿತಿ ಏನೇ ಇದ್ದರೂ, ಹುರುಪಿನಿಂದಿರುವಂತೆ ಉಳಿದವರನ್ನೂ ಹುರಿದುಂಬಿಸುತ್ತಿದ್ದರು. ಒಮ್ಮೆ, ಆಗಿನ ವಿರೋಧ ಪಕ್ಷದ ನಾಯಕರಾದ ಸುಷ್ಮಾ ಸ್ವರಾಜ್‌ರವರೊಡನೆ ಅರುಣ್ ಜೇಟ್ಲಿಯವರು ಜಮ್ಮು - ಕಾಶ್ಮೀರಕ್ಕೆ ತೆರಳುವ ಕಾರ್ಯಕ್ರಮವಿತ್ತು. ಆದರೆ, ಆ ಪ್ರದೇಶವನ್ನು ಪ್ರವೇಶಿಸಿದ ಕೂಡಲೇ ಅವರನ್ನು ರಾಜ್ಯ ಸರ್ಕಾರವು ದಸ್ತಗಿರಿ ಮಾಡುವ ತಂತ್ರ ಹೂಡಿತ್ತು, ಇದರ ಸುಳಿವನ್ನರಿತ ಅನಂತಕುಮಾರ್, ತಾವೂ ಜೇಟ್ಲಿಯವರೊಡನೆ ಹೊರಟರು, ನಿದ್ದೆಯಲ್ಲಿ ಮೂವರನ್ನೂ ವಿಮಾನ ನಿಲ್ದಾಣದಲ್ಲಿ ದಸ್ತಗಿರಿ ಮಾಡಲಾಯಿತು ಮಧ್ಯ ರಾತ್ರಿಯ ಹೊತ್ತಿಗೆ ಅಪರಿಚಿತ ಸ್ಥಳವೊಂದಕ್ಕೆ ಅವರನ್ನು ತಲುಪಿಸಲಾಯಿತು. ಅಲ್ಲಿದ ಪಕ್ಕದ ಪಂಜಾಬ್ ರಾಜ್ಯದ ಕೆಲವು ಕಾರ್ಯಕರ್ತರಿಂದ ಅನಂತಕುಮಾರ್ ಅವರು ಊಟದ ವ್ಯವಸ್ಥೆ ಮಾಡಿಸಿದರು, ಮಾರನೆಯ ದಿನ ಅವರೆಲ್ಲ ಮತ್ತೆ ಜಮ್ಮು ಕಾಶ್ಮೀರ ರಾಜ್ಯಕ್ಕೆ ಮರಳಿದಾಗ, ಪುನಃ ಅವರನ್ನು ದಸ್ತಗಿರಿ ಮಾಡಲಾಯಿತು. ಜೈಲಿನಂತೆ ಮಾರ್ಪಾಡು ಗೊಳಿಸಲಾದ ಕಟ್ಟಡವೊಂದರಲ್ಲಿ ಅವರನ್ನು ಇರಿಸಲಾಗಿತ್ತು. ಹೀಗಾಗಿ, ಕಾರ್ಯಕರ್ತರಲ್ಲಿ ಅಪಾರವಾದ ಸಿಟ್ಟು ಹೆಚ್ಚಿಸಿತ್ತು. ಮುಂದೇನು ಮಾಡುವುದೆಂದು ಎಲ್ಲರೂ ಗಂಭೀರವಾಗಿ ಚಿಂತಿಸಿ ಯೋಜನೆಗಳನ್ನು ರೂಪುಗೊಳಿಸುವಷ್ಟರಲ್ಲಿ ತಡರಾತ್ರಿ ಆಗಿತ್ತು. ಅನಂತಕುಮಾರ್ ಅವರು ಅದೇ ಗಂಭೀರ ಭಾವದಲ್ಲಿ ಇಲ್ಲಿನ ಕಾಶ್ಮೀರಿ ಭೋಜನ ಬಹಳ ಅಪರೂಪವಂತೆ, ನೀವು ಈ ಪ್ರದೇಶಕ್ಕೆ ಪರಿಚಿತರು ಇವತ್ತು ನಮಗೆಲ್ಲಾ ಕಾಶ್ಮೀರಿ ಭೋಜನದ ವ್ಯವಸ್ಥೆ ಮಾಡಿ ಎಂದು ಹೇಳಿ ಜೇಟ್ಲಿಯವರ ಪರಿಚಿತ ಭಾಜಪ ಕಾರ್ಯಕರ್ತರೊಬ್ಬರಿಗೆ ಫೋನ್ ಮಾಡಿ ಜೇಟ್ಲಿ ಅವರ ಕೈಗೆ ಕೊಟ್ಟರು. ಜೇಟ್ಲಿ ಅವರು ಊಟ ತರಲು ತಿಳಿಸಿದರು. ನಂತರ ಊಟ ಬರುವ ವರೆಗೂ ಕಾಯ್ದು ಊಟ ಬಂದ ನಂತರ ಕಾಶ್ಮೀರದ ವಿಶೇಷ ಭೋಜವನ್ನು ಮೂವರು ಸವಿದರು. ಇದು ಅನಂತಕುಮಾರ್ ಅವರ ಸಂಘಟನಾ ಚತುರತೆಗೆ ನಿದರ್ಶನದಂತಿದೆ. ದುಗುಡ ಪೂರಿತ ಸನ್ನಿವೇಶವನ್ನು ಅವರು ಲವಲವಿಕೆಯಿಂದ ನಮ್ಮನ್ನು ಹುರಿದುಂಬಿಸುತ್ತ ಸದಾ ನಮ್ಮಲ್ಲಿ ಉತ್ಸಾಹವನ್ನು ತುಂಬಿದ್ದಷ್ಟೇ ಅಲ್ಲದೆ ರಾಷ್ಟ್ರಕಾರ್ಯದಲ್ಲಿ ಕಾರ್ಯಕರ್ತರನ್ನು ಜೋಡಿಸುವ ಕಲೆಯನ್ನು ಅನಂತಕುಮಾರರು ಕರಗತ ಮಾಡಿಕೊಂಡಿದ್ದರು ಎಂದು ಅರುಣ್ ಜೇಟ್ಲಿ ಸ್ಮರಿಸಿದ್ದಾರೆ. ★

ಪುಟ 2 ರಿಂದ

# ಹೊಸತನ, ಗೆಳೆತನ ಮತ್ತು ನಿರಂತರತೆಯ ಆದರ್ಶವ್ಯಕ್ತಿ

ಅನಂತಕುಮಾರು ಪತ್ರಿಕಾರಂಗದ ಜೊತೆ ನಿಕಟಸಂಬಂಧವನ್ನು ಹೊಂದಿದ್ದರು. ಇಂದು ಕರ್ನಾಟಕದಲ್ಲಿರುವ ಹೊಸಪೀಳಿಗೆಯ ಎಲ್ಲ ಪತ್ರಕರ್ತರು ಅನಂತಕುಮಾರರನ್ನು ನೆನಪಿಸಿಕೊಳ್ಳುತ್ತಾರೆ. ಏಕೆಂದರೆ, ಅನಂತಕುಮಾರರ ಪತ್ರಿಕಾಗೋಷ್ಠಿಗಳು ಸ್ವಾರಸ್ಯಕರವಾಗಿರುತ್ತಿದ್ದವು. ಅವರು ಬಳಸುವ ಪದಗಳು ನೀಡುವ ಹೇಳಿಕೆಗಳು ಮರುದಿನದ ಪತ್ರಿಕೆಗಳಲ್ಲಿ ದಪ್ಪಕ್ಷರಗಳಲ್ಲಿ ಪ್ರಕಟವಾಗುತ್ತಿದ್ದವು. ಒಮ್ಮೆ ನಮ್ಮ ಕ್ಷೇತ್ರದ ಲೋಕಸಭೆಯ ಚುನಾವಣಾ ಪ್ರಚಾರ ಭಾಷಣದಲ್ಲಿ ಅನಂತಕುಮಾರರು ಮಾತನಾಡುತ್ತ “ಉತ್ತರಕನ್ನಡದಲ್ಲಿ ಅನಂತಕುಮಾರ್, ದಕ್ಷಿಣ ಕನ್ನಡದಲ್ಲಿ ನಳಿನ್‌ಕುಮಾರ್, ಉಡುಪಿಯಲ್ಲಿ ಸುನಿಲ್ ಕುಮಾರ್ ಅವರನ್ನು ಗೆಲ್ಲಿಸಿ" ಎಂದು ಹೇಳಿದ್ದರು. ಈ ರೀತಿಯ ಸ್ಲೋಗನ್‌ಗಳನ್ನು ತತ್ಕ್ಷಣದಲ್ಲಿ ಹೊಸೆದು ಸಾಂದರ್ಭಿಕವಾಗಿ ಹೇಳುವ ಗುಣ ಅನಂತಕುಮಾರರಲ್ಲಿತ್ತು. ರಾಜಕೀಯ ಇತಿಹಾಸದ ಬಗ್ಗೆ ಅವರಿಗೆ ಅಗಾಧವಾದ ನೆನಪಿನ ಶಕ್ತಿ ಇತ್ತು. ಮೂವತ್ತು, ನಲವತ್ತು ವರ್ಷಗಳ ರಾಜಕೀಯ ಘಟನೆಗಳನ್ನು ಇಸವಿಯ ಸಮೇತ ಸಂದರ್ಭಾನುಸಾರ ನೆನಪಿಸಿಕೊಳ್ಳುತ್ತಿದ್ದರು. ಅನೇಕ ಪತ್ರಕರ್ತರು ರಾಜಕೀಯ ಇತಿಹಾಸದ ಸಂಗತಿಗಳಿಗಾಗಿ ಅನಂತಕುಮಾರರನ್ನು ಸಂಪರ್ಕಿಸುತ್ತಿದ್ದರು. ನಾಡಿನ ಎಲ್ಲ ಸಂಪಾದಕರ ಮತ್ತು ಪತ್ರಕರ್ತರ ಜೊತೆಗೆ ಅನಂತಕುಮಾರ್ ಒಳ್ಳೆಯ ಸಂಬಂಧ ಹೊಂದಿದ್ದರು.

ಕೇಂದ್ರ ಸಚಿವರಾಗಿದ್ದ ಅನಂತಕುಮಾರರು ಕರ್ನಾಟಕದ ಹತ್ತಾರು ಅಭಿವೃದ್ಧಿ ಕೆಲಸಗಳಿಗೆ ಜೀವ ತುಂಬಿದ್ದಾರೆ. ಅವರು ತೆರೆಮರೆಯಲ್ಲಿ ನಿಂತು ಮಾಡಿಸಿದ ಕೆಲಸಗಳೂ ಅನೇಕ. ಕಳೆದ ಬಾರಿ ನಾನು ವಿರೋಧ ಪಕ್ಷದ ಸಚೇತಕನಾಗಿದ್ದಾಗ ಕಾವೇರಿ ಸಮಸ್ಯೆ ಭುಗಿಲೆದ್ದಿತ್ತು. ವಿರೋಧ ಪಕ್ಷದವರಾಗಿ ನಾವು ಧರಣಿ ಮುಂತಾದ ಹೋರಾಟದಲ್ಲಿ ನಿರತರಾಗಿದ್ದೆವು. ಸರ್ವೋಚ್ಚ ನ್ಯಾಯಾಲಯದ ಒಂದು ಮಹತ್ವದ ನಿರ್ಣಯ ಕರ್ನಾಟಕದ ಪರವಾಗಿ ಬಂದಿತು. ನಂತರ ಸಭಾಪತಿಯವರ ಕೋಣೆಯಲ್ಲಿ ನಡೆದ ಸಭೆಯಲ್ಲಿ ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯನವರು “ಇವತ್ತು ಸರ್ವೋಚ್ಚ ನ್ಯಾಯಾಲಯದಿಂದ ಈ ಆದೇಶ ಬರಲು ಅನಂತಕುಮಾರ್ ಅವರೇ ಕಾರಣ. ಅವರ ಪರಿಶ್ರಮದಿಂದ ಇದು ಸಾಧ್ಯವಾಗಿದೆ” ಎಂದು ಹೇಳಿದ್ದರು. ಅಗತ್ಯದ ಮತ್ತು ಅನಿವಾರ್ಯದ ಎಲ್ಲ ಸಂದರ್ಭಗಳಲ್ಲಿಯೂ ಅನಂತಕುಮಾರರು ವಹಿಸುತ್ತಿದ್ದ ಮುತ್ಸದ್ದಿಯ ಪಾತ್ರವನ್ನು ಸಮರ್ಥವಾಗಿ ನಿರ್ವಹಿಸುವ ನಾಯಕರು ಇಂದು ನಮ್ಮ ರಾಜ್ಯದಲ್ಲಿಲ್ಲ.

ಕೇಂದ್ರದಿಂದ, ನ್ಯಾಯಾಲಯಗಳಿಂದ ಕರ್ನಾಟಕದ ಪರವಾಗಿ ನ್ಯಾಯ ದೊರೆತಿದ್ದರೆ ಅದರ ಹಿಂದೆ ಅನಂತಕುಮಾರರ ಪಾತ್ರ ದೊಡ್ಡದು. ಅನಂತಕುಮಾರರು ನಮ್ಮ ಸ್ಮೃತಿಯಲ್ಲಿ ಸದಾ ಉಳಿದಿರುತ್ತಾರೆ. ಹೊಸಪೀಳಿಗೆಯ ನಾಯಕರು ಅನಂತಕುಮಾರರ ಜೀವನದಿಂದ ಸ್ಫೂರ್ತಿ ಪಡೆಯುತ್ತಿದ್ದಾರೆ. ಅನಂತಕುಮಾರರ ಪ್ರಭಾವ ಬಹಳ ಕಾಲ ರಾಜಕೀಯ ಕ್ಷೇತ್ರದಲ್ಲಿರುತ್ತದೆ. ಪ್ರತಿಯೊಂದು ಸಂದರ್ಭದಲ್ಲಿಯೂ ಹೊಸರೀತಿಯಲ್ಲಿ ಯೋಚಿಸಿ ಅದನ್ನು ವ್ಯಾಪಕವಾಗಿ ಪ್ರಯೋಗಿಸಿದ ಅವರು ನಮಗೆ ದಾರಿದೀಪದಂತಿದ್ದಾರೆ. ವಂದೇ ಮಾತರಂ, ಜನೌಷಧಿ, ಬೇವು ಲೇಪಿತ ಯೂರಿಯಾ ಮುಂತಾದ ಯೋಜನೆಗಳನ್ನು ಗಮನಿಸುವಾಗ ಹೊಸತನ, ಗೆಳೆತನ ಮತ್ತು ನಿರಂತರತೆಗಳು ಸಮ್ಮಿಲನಗೊಂಡ ವ್ಯಕ್ತಿ ಎಂದರೆ ಅನಂತಕುಮಾರ್ ಎಂದು ಹೇಳಬಹುದು.

ಅನಂತಕುಮಾರರು ಕೇವಲ ರಾಜಕೀಯ ಕ್ಷೇತ್ರಕ್ಕೆ ತಮ್ಮನ್ನು ಸೀಮಿತಗೊಳಿಸದೆ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಪರಿಸರ ಮುಂತಾದ ಕ್ಷೇತ್ರಗಳಲ್ಲಿಯೂ ತೊಡಗಿಕೊಂಡರು. ಈ ಹಿನ್ನೆಲೆಯಲ್ಲಿ ಅವರು ಪ್ರಾರಂಭಿಸಿದ ಅದಮ್ಯಚೇತನ ಸಂಸ್ಥೆ ಇಂದು ಹೆಮ್ಮರವಾಗಿ ಬೆಳೆದಿದೆ. ಅವರ ವಿಚಾರಗಳನ್ನು ದಾಖಲಿಸಿ ಕಾರ್ಯರೂಪಕ್ಕೆ ತರುವ ಉದ್ದೇಶದಿಂದ ಪ್ರಾರಂಭವಾಗಿರುವ ಅನಂತಕುಮಾರ್ ಪ್ರತಿಷ್ಠಾನ ಪ್ರಕಟಿಸುತ್ತಿರುವ “ಅನಂತಪಥ” ಪತ್ರಿಕೆ ತನ್ನ ಉದ್ದೇಶದಲ್ಲಿ ಯಶಸ್ವಿಯಾಗಿದೆ. ಅನಂತಕುಮಾರರ ಆಶಯ ಮತ್ತು ಕನಸುಗಳನ್ನು ನನಸಾಗಿಸುವ ಕೆಲಸವನ್ನು ನಾವೆಲ್ಲರೂ ಸೇರಿ ಮಾಡಬೇಕಾದ ಅಗತ್ಯ ಮತ್ತು ಅನಿವಾರ್ಯವಿದೆ. ಆ ಮುಖಾಂತರ ಸಾಮಾಜಿಕ ಕ್ಷೇತ್ರವನ್ನು ಇನ್ನಷ್ಟು ಗಟ್ಟಿಗೊಳಿಸಬೇಕಾದ ಕಾರ್ಯವನ್ನು ನಾವೆಲ್ಲರೂ ಮಾಡಬೇಕಿದೆ. ಜೀವನದಲ್ಲಿ ನಿರಾಸೆಯ ಕ್ಷಣಗಳು ಎದುರಾದಾಲೆಲ್ಲ ಅನಂತಕುಮಾರರು “ಅಪ್ಪುದು ತಪ್ಪದು, ಬಾರದು ಬಪ್ಪದು, ಬಪ್ಪದು ತಪ್ಪದು” ಎಂದು ಸದಾ ಹೇಳುತ್ತಿದ್ದ ಬಸವಣ್ಣನವರ ಮಾತು ನೆನಪಿಗೆ ಬರುತ್ತದೆ. ಇದು ಇಂದಿನ ಎಲ್ಲ ರಾಜಕೀಯ ಕಾರ್ಯಕರ್ತರಿಗೆ ಅವರು ಉಪದೇಶಿಸಿದ ಮಂತ್ರ ಎಂದು ನನಗನಿಸುತ್ತದೆ. ★

**ಪ್ಲೇಟ್ ಬ್ಯಾಂಕ್ ಯೋಜನೆಯ ನೆರವು ಪಡೆಯಲು ಸಂಪರ್ಕಿಸಿ:**

ಬೆಂಗಳೂರು: ಅನ್ನಪೂರ್ಣ, ಬಿಬಿಎಂಪಿ ಸಮುದಾಯ ಭವನ, ಕೆಂಪೇಗೌಡ ನಗರ, ಬೆಂಗಳೂರು 560019 ದೂರವಾಣಿ : 080-26620404

ಹುಬ್ಬಳ್ಳಿ: 'ಗುರುಪ್ರಭ' ಕೆಂಪಣ್ಣನವರ ಕಲ್ಯಾಣ ಮಂಟಪದ ಸಮೀಪ, ವಿಜಯನಗರ, ಹುಬ್ಬಳ್ಳಿ-580032 ದೂರವಾಣಿ: 9845658879

ಕಲಬುರ್ಗಿ: ಅನ್ನಪೂರ್ಣ, ಮಹಾನಗರ ಪಾಲಿಕೆ ಕಟ್ಟಡ, ಸಂತೋಷ ಕಾಲನಿ, ಉದನೂರು ರಸ್ತೆ ಕಲಬುರ್ಗಿ,
ದೂರವಾಣಿ: 9448359355/7353638000

ಗದಗ: ಸನ್ ರೈಸ್ ಪ್ರೀ ಸ್ಕೂಲ್, ರೈಲ್ವೆ ಪೋಲೀಸ್ ಕ್ವಾಟರ್ಸ್ ಸಮೀಪ, ಮಸಾರಿ, ಗದಗ -582101 ದೂರವಾಣಿ : 8050692131

# ಹಾಸನ ಜಿಲ್ಲೆಯ ಕೆಲವು ದೇವಾಲಯಗಳು ಭಾಗ -2

ದೇಗುಲದರ್ಶನ ಮಾಲಿಕೆ - 9



ಈ ತಿಂಗಳ ದೇಗುಲದರ್ಶನ ಕಾರ್ಯಕ್ರಮದಲ್ಲಿ ನಾವು ಹಾಸನ ಜಿಲ್ಲೆಯ ಇನ್ನಷ್ಟು ಪುರಾತನ ದೇವಾಲಯಗಳನ್ನು ಪರಿಚಯಮಾಡಿಕೊಳ್ಳೋಣ. ಈ ಭಾಗದಲ್ಲಿ ಬೇಲೂರು ಮತ್ತು ಆಸುಪಾಸಿನ ಕೆಲವು ದೇಗುಲಗಳನ್ನು ನೋಡೋಣ. ಹೊಯ್ಸಳ ಶಿಲ್ಪಕಲೆಯ ಶ್ರೇಷ್ಠ ಮಾದರಿಗಳಾದ ಈ ಆಲಯಗಳು ಬಹುತೇಕ 12-13 ನೇ ಶತಮಾನದ ಕಾಲದವು.

ಬೇಲೂರಿನಲ್ಲಿ ಹೊಯ್ಸಳ ಅರಸ ವಿಷ್ಣುವರ್ಧನ ಕಟ್ಟಿಸಿದ ಚೆನ್ನಕೇಶವ ದೇವಾಲಯ ಜಗತ್ಪ್ರಸಿದ್ಧವಾದುದು. ಈ ದೇವಾಲಯ ಸಂಕೀರ್ಣಕ್ಕೆ ಸದ್ಯದಲ್ಲೇ ವಿಶ್ವಪಾರಂಪರಿಕ ತಾಣದ ಮಾನ್ಯತೆ ಪ್ರಾಪ್ತವಾಗಲಿರುವುದು ಅತಿಶಯವೇನೂ ಅಲ್ಲ. ಚೆನ್ನಕೇಶವ ದೇವಾಲಯದ ಕಟ್ಟಡ ವಿನ್ಯಾಸ, ಹೊರಭಿತ್ತಿಯ ಶಿಲ್ಪಗಳು, ಎತ್ತರದ ಜಗತಿ (ಜಗಲಿ), ಆನೆ, ಕುದುರೆ, ಯಾಳಿ, ಹಂಸ ಮೊದಲಾದವುಗಳನ್ನು ಚಿತ್ರಿಸುವ ಅಧಿಷ್ಠಾನದ ಪಟ್ಟಿಕೆಗಳು, ಹೊರಭಿತ್ತಿಯ ಮೇಲುಸ್ತರದಲ್ಲಿ ಸಾಲಭಂಜಿಕೆ ಅಥವಾ ಮದನಿಕೆಯರ ಸುಂದರ ಪ್ರತಿಮೆಗಳು, ವಿವಿಧ ದೇವತಾಮೂರ್ತಿಗಳು ಎಲ್ಲವೂ ಶಿಲ್ಪಕಲೆಯ ಅತ್ಯುತ್ಕೃಷ್ಟ ಮಾದರಿಗಳಾಗಿವೆ. ಒಳಗುಡಿಯ ಚೆನ್ನಕೇಶವನ ವಿಗ್ರಹ ಭವ್ಯವಾಗಿದೆ. ಗರ್ಭಗುಡಿಯ ಬಾಗಿಲ ಮಕರತೋರಣದಲ್ಲಿ ಚಿತ್ರಿಸಿರುವ ಮಕರಗಳು, ದೇವಾನುದೇವತೆಗಳ ನಡುವೆ ಲಕ್ಷ್ಮೀನಾರಾಯಣರ ಮೂರ್ತಿಯ ಕೆತ್ತನೆ, ಬಾಗಿಲ ಎರಡೂ ಬದಿಯ ದ್ವಾರಪಾಲಕರ ವಿಗ್ರಹಗಳು, ಎಡಬದಿಯ ಕಂಬದ ಮುಂಭಾಗದಲ್ಲಿ ನಿಂತ ಮೋಹಿನಿಯ ಶಿಲ್ಪ ಎಲ್ಲವೂ ಅವರ್ಣನೀಯ ಸೌಂದರ್ಯದಿಂದ ಬೆರಗು ಮೂಡಿಸುತ್ತವೆ. ನವರಂಗದ ಭುವನೇಶ್ವರಿ, ಸುತ್ತಲಿನ ಕಂಬಗಳ ವಿನ್ಯಾಸ ಹೊಯ್ಸಳ ಶೈಲಿಯ ಭವ್ಯತೆಯನ್ನು ಪ್ರದರ್ಶಿಸುತ್ತವೆ. ಬೇಲೂರಿನಲ್ಲಿ ನೀವು ನೋಡಬಹುದಾದ ಇನ್ನೂ ಕೆಲವು ಪುರಾತನ ಗುಡಿಗಳಿವೆ. ಶಂಕರೇಶ್ವರ, ಪಾತಾಳೇಶ್ವರ, ಅಮೃತೇಶ್ವರ ಮೊದಲಾದವು. ವಿಷ್ಣು ಸಮುದ್ರ ಎಂಬ ಪುಷ್ಕರಣಿಯೂ ಸುಂದರವಾಗಿದೆ.





ಬೇಲೂರಿನಿಂದ ಹಳೇಬೀಡು ಮಾರ್ಗವಾಗಿ 35 ಕಿಮೀ ಕ್ರಮಿಸಿ ಜಾವಗಲ್ಲಿಗೆ ಬರಬಹುದು. ಇಲ್ಲಿನ ಲಕ್ಷ್ಮೀ ನರಸಿಂಹ ದೇವಾಲಯ ಹೊಯ್ಸಳ ಶೈಲಿಯ ಪ್ರಸಿದ್ಧ ದೇವಾಲಯಗಳಲ್ಲೊಂದು. ದೇವಾಲಯದ ಸುತ್ತಲಿನ ಭಿತ್ತಿಗಳ ಮೇಲಿನ ದೇವತಾಶಿಲ್ಪಗಳು ಮನಸೆಳೆಯುತ್ತವೆ. ಇದೊಂದು ತ್ರಿಕೂಟ ದೇವಾಲಯವಾಗಿದ್ದು ಮೂರು ಗರ್ಭಗುಡಿಗಳಲ್ಲಿ ವೇಣುಗೋಪಾಲ, ಶ್ರೀಧರ ಮತ್ತು ಲಕ್ಷ್ಮೀ ನರಸಿಂಹ ಮೂರ್ತಿಗಳಿವೆ. ಜಾವಗಲ್ಲಿನಿಂದ ಸುಮಾರು ಏಳು ಕಿ.ಮೀ. ದೂರದಲ್ಲಿ ನೇರಳಿಗೆ ಎಂಬ ಗ್ರಾಮವಿದೆ. ಇಲ್ಲಿನ ಹೊಯ್ಸಳ ದೇವಾಲಯದಲ್ಲಿ ಚೆನ್ನಕೇಶವ ವಿಗ್ರಹಕ್ಕೆ ಪೂಜೆ ಸಲ್ಲುತ್ತಿದೆ. ಒಳಗುಡಿಯ ಇನ್ನೊಂದು ಭಾಗದಲ್ಲಿ ವಿಠ್ಠಲನ ಮೂರ್ತಿಯಿರುವುದೊಂದು ವಿಶೇಷ.



ಜಾವಗಲ್ಲಿನಿಂದ ಹಾರನಹಳ್ಳಿಯ ಕಡೆಗೆ ಹೋಗುವ ರಸ್ತೆಯಲ್ಲಿ ಹತ್ತು ಕಿ.ಮೀ. ಕ್ರಮಿಸಿದರೆ ಉಂಡಿಗನಾಳು ಎಂಬ ಗ್ರಾಮ ಸಿಗುತ್ತದೆ. ಇಲ್ಲಿಯೂ ಕೆಲವು ಇತಿಹಾಸ ಪ್ರಸಿದ್ಧ ದೇವಾಲಯಗಳಿವೆ. ಚೌಡೇಶ್ವರಿ ದೇವಾಲಯವು ಹೊಯ್ಸಳ ಕಾಲದ್ದು. ಮಹಿಷಾಸುರ ಮರ್ದಿನಿಯ ವಿಗ್ರಹವನ್ನು ಚೌಡೇಶ್ವರಿ ಎಂಬ ಹೆಸರಿನಲ್ಲಿ ಪೂಜಿಸಲಾಗುತ್ತಿದ್ದು, ಗುಡಿಯೊಳಗೆ ಶಿವಲಿಂಗ, ಗಣಪತಿ ಮತ್ತಿತರ ವಿಗ್ರಹಗಳೂ ಇವೆ. ಉಂಡಿಗನಾಳಿನಲ್ಲಿರುವ ಇನ್ನೊಂದು ಮುಖ್ಯ ದೇವಾಲಯ ನಿಂಬುಜಾದೇವಿಯದು. ಬಹುಶಃ ವಿಜಯನಗರದ ಅರಸರ ಕಾಲದಲ್ಲಿ ಗುಜರಾತ್ ಕಡೆಯಿಂದ ಬಂದ ಜೆಟ್ಟಿಗಳ ಕುಲದವರು ತಮ್ಮ ಕುಲದೈವವಾದ ನಿಂಬುಜಾ ದೇವಿಯ ವಿಗ್ರಹವನ್ನು ತಂದು ಪ್ರತಿಷ್ಠಾಪಿಸಿದರೆಂದು ಐತಿಹ್ಯವಿದೆ. ಮುಂದೆ, ಮೈಸೂರು ಅರಸರ ಕಾಲದಲ್ಲಿ ಜೆಟ್ಟಿ ಜನಾಂಗದವರು ಸ್ಥಾಪಿಸಿದ ಇಂತಹ ಇನ್ನೊಂದು ದೇವಾಲಯ ಮೈಸೂರಿನ ನಜರ್ ಬಾದಿನಲ್ಲಿದೆ.





ಉಂಡಿಗನಾಳಿನಿಂದ ಹೊರಟು 17 ಕಿ.ಮೀ. ದೂರದ ಪ್ರಯಾಣದ ನಂತರ ಹಾರನಹಳ್ಳಿಯನ್ನು ತಲುಪುತ್ತೀರಿ. ಇಲ್ಲಿ ಹೊಯ್ಸಳರ ಎರಡು ಸುಂದರವಾದ ದೇವಾಲಯಗಳಿವೆ. ಲಕ್ಷ್ಮೀನರಸಿಂಹ ಮತ್ತು ಸದಾಶಿವ ದೇವಾಲಯಗಳು. ಎರಡೂ ದೇವಾಲಯಗಳ ಹೊರಭಿತ್ತಿಗಳೂ ಶಿಖರಗಳೂ ಆಕರ್ಷಕ ಶಿಲ್ಪಕಲೆ, ಹೊಯ್ಸಳ ವಿನ್ಯಾಸಗಳಿಂದ ಕೂಡಿ ಮನಸೆಳೆಯುತ್ತವೆ. ಲಕ್ಷ್ಮೀನರಸಿಂಹ ದೇವಾಲಯವು ತ್ರಿಕೂಟ ರಚನೆಯಾಗಿದ್ದು ಇಲ್ಲಿನ ಮೂರು ಗರ್ಭಗುಡಿಗಳಲ್ಲಿ ಎಡದಿಂದ ಕ್ರಮವಾಗಿ ವೇಣುಗೋಪಾಲ, ಕೇಶವ ಮತ್ತು ಲಕ್ಷ್ಮೀ ನರಸಿಂಹ ದೇವತಾಶಿಲ್ಪಗಳಿವೆ. ನಿತ್ಯವೂ ಶಾಸ್ತ್ರೋಕ್ತವಾಗಿ ಪೂಜೆ ಸಲ್ಲುತ್ತಿದ್ದು ದೇವಾಲಯದ ಆವರಣ ಕಣ್ಸೆಳೆಯುವಂತಿದೆ. ಆದರೆ ಸದಾಶಿವ ದೇವಾಲಯ ಸರಿಯಾದ ರಕ್ಷಣೆಯಿಲ್ಲದೆ ಹಾಳಾಗುವ ಸ್ಥಿತಿಗೆ ತಲುಪಿರುವುದು ವಿಷಾದನೀಯ. ಇಲ್ಲಿಯ ಗರ್ಭಗುಡಿಯಲ್ಲಿದ್ದ ಶಿವಲಿಂಗವನ್ನು ಕಿಡಿಗೇಡಿಗಳು ಹಾಳುಗೆಡವಿರುವುದಲ್ಲದೆ, ಹೊರಗೋಡೆಗಳ ಮೇಲಿನ ಹೊಯ್ಸಳ ಶಿಲ್ಪಗಳು ಅಂದಗೆಡುವಂತಾಗಿವೆ. ಇಲಾಖೆಯವರೂ ಸ್ಥಳೀಯರೂ ಕಾಳಜಿವಹಿಸಿ ಈ ಐತಿಹಾಸಿಕ ಮಹತ್ವದ ದೇಗುಲದ ರಕ್ಷಣೆಗೆ ಮುಂದಾಗುವುದು ಅತ್ಯವಶ್ಯ.

**ಟಿ ಎಸ್ ಗೋಪಾಲ್ | ಕೆಂಗೇರಿ ಚಕ್ರಪಾಣಿ**





ಈ ಕಾರ್ಯಕ್ರಮವನ್ನು ಯೂಟ್ಯೂಬ್ ನಲ್ಲಿ ವೀಕ್ಷಿಸಿ
http://YouTube.com/AnanthkumarPratishthana

# " ಕಾಶ್ಮೀರ ಬರಿಯ ಪ್ರವಾಸಿ ತಾಣವಲ್ಲ, ಪ್ರಾಚೀನ ನಾಗರಿಕತೆಯ ತವರು"

**ಆರ್ ಕೆ ಮಟ್ಟೂ**

ಪತ್ರಕರ್ತರು ಹಾಗೂ ಅಧ್ಯಕ್ಷರು,
ಕಾಶ್ಮೀರಿ ಹಿಂದೂ ಕಲ್ಚರಲ್ ವೆಲ್ ಫೇರ್ ಟ್ರಸ್ಟ್



1990 ರಲ್ಲಿ ಭಯೋತ್ಪಾದಕರು ಮತ್ತು ಅವರ ಸಮರ್ಥಕರು ಕಾಶ್ಮೀರಿ ಹಿಂದೂಗಳನ್ನು ಬೇಟೆಯಾಡಿ ಅವರನ್ನು ತಮ್ಮ ತಾಯ್ನೆಲದಿಂದ ಓಡಿಸಿದಾಗ ಅವರೆಲ್ಲ ಮೊದಲಿಗೆ ಜಮ್ಮುವಿನಲ್ಲಿ ಆಶ್ರಯ ಪಡೆದು ನಂತರ ಅಲ್ಲಿಂದ ದೇಶದ ವಿವಿಧ ಭಾಗಗಳಿಗೆ ವಲಸೆ ಹೋದರು. ಬೆಂಗಳೂರಿನ ಐಟಿಐ, ಎಚ್‌ಎಂಟಿ ಗಳಲ್ಲಿ ಕೆಲಸ ಮಾಡುತ್ತಿದ್ದ ಅನೇಕ ಕಾಶ್ಮೀರಿಗಳ ಕುಟುಂಬಗಳು ಬೆಂಗಳೂರಿಗೆ ಬಂದು ವಾಸಿಸತೊಡಗಿದವು. ಪ್ರಾರಂಭದಲ್ಲಿ ನೀರು, ವಿದ್ಯುತ್ತುಗಳ ಸೌಕರ್ಯವಿಲ್ಲದೆ ಬದುಕು ದುಸ್ತರವಾಗಿತ್ತು.

ಅಂತಹ ಕಾಲದಲ್ಲಿ ನಾವು ಅನಂತಕುಮಾರರ ಮನೆಗೆ ಹೋಗುತ್ತಿದ್ದೆವು. ಆಗ ಅವರು ಅಧಿಕಾರದಲ್ಲಿರಲಿಲ್ಲ. ಅವರು ಸಂಸದರೂ ಆಗಿರಲಿಲ್ಲ. ಯಡಿಯೂರಪ್ಪನವರ ಜೊತೆಗೆ ಅವರು ಕರ್ನಾಟಕದಲ್ಲಿ ಪಕ್ಷವನ್ನು ಕಟ್ಟುವ ಕೆಲಸದಲ್ಲಿ ನಿರತರಾಗಿದ್ದರು. ಆದರೂ ಅವರು ಕಾಶ್ಮೀರಿಗಳ ಅತಿದೊಡ್ಡ ಹಿತೈಷಿಯಾಗಿದ್ದರು. ಅನಂತಕುಮಾರರು ನಿರಂತರವಾಗಿ ನಮ್ಮ ಬೆಂಬಲಕ್ಕೆ ನಿಂತು ಸಹಾಯ ಮಾಡಿದರು. ಬೆಂಗಳೂರಿನಲ್ಲಿ ಕಾಶ್ಮೀರ ಭವನವನ್ನು ನಿರ್ಮಾಣ ಮಾಡಿ ನಮ್ಮ ಸಂಸ್ಕೃತಿಯನ್ನು ಉಳಿಸಿಕೊಳ್ಳಬೇಕೆಂಬ ಉದ್ದೇಶದಿಂದ ನಾವು ಕಾರ್ಯಪ್ರವೃತ್ತರಾಗಿದ್ದೆವು. ಆದರೆ, ನಮ್ಮನ್ನು ಕಣಿವೆಯಿಂದ ಓಡಿಸಿದ ದುಷ್ಟಶಕ್ತಿಗಳೇ ಈ ಕಾರ್ಯಕ್ಕೂ ಅಡ್ಡಗಾಲು ಹಾಕಿದವು. ಇಲ್ಲಿ ಕಾಶ್ಮೀರಿ ಹಿಂದೂಗಳಿಗೆ ಭವನ ನಿರ್ಮಿಸಲು ಅವಕಾಶ ಕೊಟ್ಟರೆ ಸಾಮಾಜಿಕ ಸಾಮರಸ್ಯ ಹಾಳಾಗುತ್ತದೆ ಎಂಬುದು ಅವರ ವಾದವಾಗಿತ್ತು! ಹೀಗಾಗಿ ಎಂಟು ವರ್ಷಗಳ ಕಾಲ ನಾವು ನ್ಯಾಯಾಲಯದಲ್ಲಿ ಹೋರಾಟ ನಡೆಸಬೇಕಾಯಿತು. ಈ ಸಮಯದಲ್ಲಿ ನಮ್ಮ ಹೋರಾಟಕ್ಕೆ ಅನಂತಕುಮಾರ್ ಸಂಪೂರ್ಣ ಬೆಂಬಲ ನೀಡಿದ್ದರು. ಭವನದ ನಿರ್ಮಾಣಕ್ಕೆ ತಮ್ಮ ಸಂಸದರ ನಿಧಿಯಿಂದಲೂ ಧನ ಸಹಾಯ ಮಾಡಿದರು.

2019ಕ್ಕೆ ಮೊದಲು ಕಾಶ್ಮೀರಿಗಳು ಸಂವಿಧಾನದ 370ನೇ ವಿಧಿಯನ್ನು ಶಾಶ್ವತ ಎಂದು ಭಾವಿಸಿದ್ದರು. ಕಾಶ್ಮೀರದ ರಾಜಕೀಯ ಇದೇ ರೀತಿ ಮುಂದುವರೆಯುವುದೆಂದು ಎಲ್ಲರೂ ತಿಳಿದಿದ್ದರು. ಆದರೆ ಮೋದಿ ಮತ್ತು ಅಮಿತ್ ಶಾ ಜೋಡಿ ಎಲ್ಲ ಲೆಕ್ಕಾಚಾರಗಳನ್ನೂ ತಲೆಕೆಳಗು ಮಾಡಿತು. 370ನೇ ವಿಧಿಯು 65 ವರ್ಷಗಳ ತನಕ ಕಾಶ್ಮೀರದ ಒಂದು ವರ್ಗದ ಜನರಿಗೆ ಭ್ರಮೆಯನ್ನು ಹುಟ್ಟಿಸಿ, ಅವರ ಮನಸ್ಸುಗಳನ್ನು ಕೆಡಿಸಿತ್ತು. ನಿರಂತರವಾಗಿ ಅತ್ಯಾಚಾರಕ್ಕೆ ಒಳಗಾದ ಕಾಶ್ಮೀರಿ ಹಿಂದೂಗಳ ಸಂಖ್ಯೆ ಇಳಿಮುಖವಾಗುತ್ತ ಬಂದು ಕೊನೆಗೆ ಶೇ. 2 ಕ್ಕೆ ತಲುಪಿತ್ತು.

ಕಾಶ್ಮೀರದಲ್ಲಿ ಪರಿಸ್ಥಿತಿ ಬಿಗಡಾಯಿಸಿದ್ದು 1986 ರಲ್ಲಿ ಶ್ರೀ ಮುಫ್ತಿ ಮೊಹಮ್ಮದ್ ಸಯೀದ್ ಮುಖ್ಯಮಂತ್ರಿಯಾದ ನಂತರ. ಅವರ ತುಷ್ಟೀಕರಣ ನೀತಿಯಿಂದಾಗಿ, ಕಾಶ್ಮೀರದಲ್ಲಿ ಹೊಸ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿಲ್ಲ. ಹಿಂದೂಗಳಿಗೆ ಶಿಕ್ಷಣದ ಅವಕಾಶಗಳೂ ಕಡಿಮೆಯಾದವು. ಅಲ್ಪಸಂಖ್ಯಾತರಾಗಿದ್ದ ಹಿಂದೂಗಳನ್ನು ಮುಂದುವರಿದ ಜನಾಂಗ ಎಂದು ಪರಿಗಣಿಸಿ ಅವರನ್ನು ಎಲ್ಲ ಅವಕಾಶಗಳಿಂದ ವಂಚಿಸಲಾಯಿತು. ಸೂಕ್ಷ್ಮವಾಗಿ ಗಮನಿಸಿದರೆ, ಸಂವಿಧಾನದ 370ನೇ ವಿಧಿಯು ಕಾಶ್ಮೀರವು ಭಾರತದ ಭಾಗ ಎಂಬುದನ್ನು ಕೇವಲ ಕಾಗದಕ್ಕೆ ಸೀಮಿತವಾಗಿ ಉಳಿಸಿತ್ತು ಎಂದು ಅರಿವಾಗುತ್ತದೆ.

1990 ರ ನಂತರದ ಸರಕಾರಗಳು ಕಾಶ್ಮೀರದಲ್ಲಿ ನಡೆದ ಹಿಂದೂಗಳ ನರಮೇಧವನ್ನು ಮುಚ್ಚಿಹಾಕಲು ಪ್ರಯತ್ನಿಸಿದವು. ಕಾಶ್ಮೀರಿ ಹಿಂದೂಗಳ ವಲಸೆಯ ಕುರಿತು ಯಾರೂ ಮಾತನಾಡುತ್ತಿರಲಿಲ್ಲ. ಇವರ ಅಪಪ್ರಚಾರದಿಂದ ಸರ್ವೋಚ್ಚ ನ್ಯಾಯಾಲಯ ಕೂಡ ಈ ವಿಷಯದಲ್ಲಿ ಮಧ್ಯ ಪ್ರವೇಶಿಸಲು ನಿರಾಕರಿಸಿತು. ಕೇಂದ್ರ ಹಾಗೂ ರಾಜ್ಯ ಸರಕಾರಗಳ ಕುಮ್ಮಕ್ಕಿನಿಂದಲೇ ಕಾಶ್ಮೀರಕ್ಕೆ ಹೊರಗಿನಿಂದ ಬಂದ ಕೊಲೆಗಡುಕರು ನರಮೇಧವನ್ನು ಕಾರ್ಯಗತಗೊಳಿಸಿದ್ದರಿಂದ ದೇಶದ ಜನರಿಂದ ಸತ್ಯವನ್ನು ಮುಚ್ಚಿಡಲಾಯಿತು. ಇಷ್ಟೆಲ್ಲ ಆದರೂ, ಕಾಶ್ಮೀರಿ ಹಿಂದೂಗಳಿಗೆ ಆಶ್ರಯ ನೀಡಿ ಕಾಪಾಡಿದವರು ಹಿಮಾಲಯದಿಂದ ಕನ್ಯಾಕುಮಾರಿಯವರೆಗೂ ನೆಲೆಸಿರುವ ಹಿಂದೂಗಳೇ.




ಸಮಸ್ತ ಹಿಂದೂ ಸಮಾಜ ನೀಡಿದ ತಾತ್ವಿಕ ಬೆಂಬಲದಿಂದಲೇ ಕಾಶ್ಮೀರಿಗಳು ಭಯೋತ್ಪಾದನೆಯನ್ನು ಎದುರಿಸುವುದು ಸಾಧ್ಯವಾಯಿತು. ಕಾಶ್ಮೀರದ ನರಮೇಧದಲ್ಲಿ ಸುಮಾರು 700 ಹಿಂದೂಗಳ ಕೊಲೆಯಾಯಿತು. ಅಂದಿನ ಘಟನಾವಳಿಗಳ ಸತ್ಯವನ್ನು ಕಾಶ್ಮೀರಿ ಫೈಲ್ಸ್ ಸಿನಿಮಾ ಜನರಿಗೆ ತೆರೆದು ತೋರಿಸಿತು. ಕಾಶ್ಮೀರಿ ಹಿಂದೂಗಳ ಸ್ವಾತಂತ್ರ್ಯವನ್ನು ಮೊಟಕುಗೊಳಿಸಿದ್ದ ಸಂವಿಧಾನದ 370 ನೇ ವಿಧಿಯ ರದ್ದತಿಯು ಒಂದು ಸ್ವಾಗತಾರ್ಹ ಬೆಳವಣಿಗೆ. 32 ವರ್ಷಗಳ ಸುದೀರ್ಘ ಅವಧಿಯಲ್ಲಿ ನಡೆದ ಅನ್ಯಾಯಗಳನ್ನು ಸರಿಪಡಿಸಲು ಇನ್ನೂ 50 ವರ್ಷಗಳು ಬೇಕಾಗಬಹುದು. ಈಗ ನಾವು ಕಾಶ್ಮೀರಿ ಹಿಂದೂಗಳ ಪುನರ್ವಸತಿಯ ಕುರಿತು ಚಿಂತಿಸಬೇಕಾಗಿದೆ.

ಈ ದಿಸೆಯಲ್ಲಿ ಭಾರತೀಯರು, ಗುಲ್ಮಾರ್ಗ್, ಶಿಕಾರಾ, ಪಹಲ್ಗಾಮ್ ಗಳನ್ನು ಮಾತ್ರ ಕಾಶ್ಮೀರ ಎಂದು ಪರಿಗಣಿಸದೆ ಇದನ್ನು ಜಗತ್ತಿನ ಅತ್ಯಂತ ಹಳೆಯ ನಾಗರಿಕತೆಯ ತವರು ಎಂದು ಭಾವಿಸಬೇಕು. ಜಗತ್ತಿನ ಅತ್ಯಂತ ಹಳೆಯ ಪಂಚಾಂಗ (ಕಾಲಗಣನೆ) ಕಾಶ್ಮೀರಕ್ಕೆ ಸೇರಿದ್ದು. ಮುಸ್ಲಿಮರು ಕಾಶ್ಮೀರವನ್ನು ತಮ್ಮ ಗುರಿಯಾಗಿಸಿಕೊಳ್ಳಲು ಇದು ಹಿಂದೂಧರ್ಮದ ನೆಲೆ, ಜ್ಞಾನ ಮತ್ತು ಸಂಸ್ಕೃತಿಗಳ ಪೀಠ ಎಂಬುದೇ ಏಕೈಕ ಕಾರಣವಾಗಿತ್ತು ಎಂಬುದನ್ನು ಎಲ್ಲರೂ ತಿಳಿಯಬೇಕು. ಇಲ್ಲಿನ ಹಿಂದೂ ಸಂಸ್ಕೃತಿಯನ್ನು ನಾಶ ಮಾಡಿ ಇಸ್ಲಾಮಿಕ್ ದೇಶವನ್ನು ಸ್ಥಾಪಿಸುವುದು ಅವರ ಗುರಿಯಾಗಿತ್ತು. ನಿಧಾನವಾಗಿಯಾದರೂ ಎಲ್ಲರ ಲಕ್ಷ್ಯ ಈ ಕಡೆಗೆ ಹರಿಯುತ್ತಿದೆ. ಕಳೆದ 30 ವರ್ಷಗಳಲ್ಲಿ 500 ಕ್ಕೂ ಹೆಚ್ಚು ದೇವಾಲಯಗಳು ಇನ್ನೂ ತಮ್ಮ ಅಸ್ತಿತ್ವ ಉಳಿಸಿಕೊಂಡಿದ್ದರೆ ಅದಕ್ಕಾಗಿ ನಾವು ಸೇನೆಗೆ ಧನ್ಯವಾದಗಳನ್ನು ಅರ್ಪಿಸಬೇಕು.

ಅಭಿನವ ಗುಪ್ತ, ಬಿಲ್ಹಣ, ಕಲ್ಹಣರ ಈ ನೆಲವನ್ನು, ಶಂಕರ, ರಾಮಾನುಜ, ವಿವೇಕಾನಂದರು ಭೇಟಿ ನೀಡಿದ ಈ ಪ್ರದೇಶವನ್ನು ಸಮಸ್ತ ಭಾರತೀಯರೂ ತಮ್ಮದಾಗಿ ಮಾಡಿಕೊಳ್ಳಬೇಕು. ಕಾಶ್ಮೀರಕ್ಕೆ ಹೋಗಿ ಅಲ್ಲಿನ ಸಂಸ್ಕೃತಿಯ ಪರಿಚಯ ಮಾಡಿಕೊಳ್ಳಬೇಕು. ಹಿಂದೂಗಳಿಗೆ ಪವಿತ್ರವಾದ ಶಾರದಾ ಪೀಠ ಪಾಕ್ ಆಕ್ರಮಿತ ಕಾಶ್ಮೀರದಲ್ಲಿದೆ. ಅದನ್ನು ತೆರೆಯಲು ಭಾರತದ ಸರಕಾರ ಪ್ರಯತ್ನಿಸಬೇಕು. ಭಾರತದ ಇಂದಿನ ಶಕ್ತಿಯನ್ನು ಗಮನಿಸಿದರೆ ಇದು ಸಾಧ್ಯ. ಕಾಶ್ಮೀರಕ್ಕೆ ಕೇವಲ ಪ್ರವಾಸಿಗಳಾಗಿ ಬಂದರೆ ಸಾಲದು. ಇಲ್ಲಿ ಹೂಡಿಕೆಗಳು ನಡೆಯಬೇಕು, ಉದ್ಯೋಗಾವಕಾಶಗಳು ಸೃಷ್ಟಿಯಾಗಬೇಕು. ಇಡೀ ಭಾರತದಿಂದ ವಿದ್ಯಾರ್ಥಿಗಳು ಇಲ್ಲಿ ಬಂದು ಕಲಿಯುವಂತಹ ಉನ್ನತ ದರ್ಜೆಯ ಶಿಕ್ಷಣ ಸಂಸ್ಥೆಗಳನ್ನು ಇಲ್ಲಿ ತೆರೆಯಬೇಕು. ಇಲ್ಲಿ ಮುಸ್ಲಿಂ ಸಾಂದ್ರತೆ ಕಡಿಮೆಯಾಗಬೇಕು. ನಿಧಾನವಾಗಿಯಾದರೂ ಸುಭದ್ರ ಸಮಾಜ ನಿರ್ಮಾಣವಾಗಬೇಕು. ಕಾಶ್ಮೀರಿ ಹಿಂದೂಗಳು ಕಣಿವೆಗೆ ಮರಳುವ ಹಾದಿ ದುರ್ಗಮವಾಗಿಯೇ ಇದೆ. ಹಳ್ಳಿಗಳಲ್ಲಿ ಚೆದುರಿದಂತೆ ಬದುಕಿದ್ದ ಅವರು ನೆರೆಹೊರೆಯ ಮುಸ್ಲಿಮರಿಂದಲೇ ಮೋಸ ಹೋದವರು. ಅವರು ಹಿಂದೆ ಬಿಟ್ಟು ಬಂದ ಆಸ್ತಿಗಳನ್ನು ನೆರೆಹೊರೆಯ ಪರಿಚಿತ ಮುಸ್ಲಿಮರೇ ಆಕ್ರಮಿಸಿಕೊಂಡಿದ್ದಾರೆ. ಅಂಥವರ ಮನಸ್ಸು ಬದಲಾಗುವುದು ಕನಸಿನ ಮಾತು. ಅವರಿಂದ ಆಸ್ತಿಗಳನ್ನು ಮರುವಶ ಮಾಡಿಕೊಂಡು ಅದೇ ನೆರೆಹೊರೆಯ ನಡುವೆ ಬದುಕುವುದು ಊಹಾತೀತ. ಆದುದರಿಂದ ಸರಕಾರವು ಸದ್ಯಕ್ಕೆ ಕಾಶ್ಮೀರಿಗಳಿಗೆ ಪ್ರತ್ಯೇಕ ಕಾಲೋನಿಗಳನ್ನು ನಿರ್ಮಿಸುವ ಬಗ್ಗೆ ಯೋಚಿಸಬೇಕು.

ನಮಗೆ ಇಸ್ಲಾಂ ಧರ್ಮದ 1400 ವರ್ಷಗಳ ಇತಿಹಾಸ ತಿಳಿದಿದೆ. ಮತಾಂತರ ಅದರ ಏಕೈಕ ಕಾರ್ಯಕ್ರಮ. ದೇಶದ ಹಾಗೂ ಪ್ರಪಂಚದ ಇತರ ಭಾಗಗಳಲ್ಲಿಯೂ ಇದೇ ನಡೆಯುತ್ತಿದೆ ಎಂಬುದನ್ನು ಗಮನಿಸಿ ಸರಕಾರವು ಕಠಿಣವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು. ಭಯೋತ್ಪಾದನೆಯನ್ನು ನಿರ್ದಾಕ್ಷಿಣ್ಯವಾಗಿ ನಿಗ್ರಹಿಸಬೇಕು. ತಮ್ಮ ಮೇಲೆ ಇಷ್ಟೆಲ್ಲ ದೌರ್ಜನ್ಯ ನಡೆದರೂ ಕಾಶ್ಮೀರಿ ಹಿಂದೂಗಳು ಹಿಂಸೆಗೆ ಇಳಿಯಲಿಲ್ಲ ಎಂಬುದಕ್ಕೆ ಅವರ ಮೇಲೆ ಇದುವರೆಗೆ ಒಂದೇ ಒಂದು ಮೊಕದ್ದಮೆ ದಾಖಲಾಗದಿರುವುದೇ ನಿದರ್ಶನ.

**(8ನೇ ಆವೃತ್ತಿಯ 'ದೇಶ ಮೊದಲು' ವೆಬಿನಾರ್ ಸಂವಾದದ ಭಾಷಣದ ಸಂಗ್ರಹರೂಪ)**

# ಬಾಳೆಯ ಗಿಡ



ಸಸ್ಯಲೋಕ ಪರಿಚಯ ಮಾಲಿಕೆ- 6

ಬಾಳೆಹಣ್ಣಿಗೆ ಉಗಮಸ್ಥಾನ ನಮ್ಮ ಭಾರತ ದೇಶವೇ. ಭಾರತದ ಎಲ್ಲ ರಾಜ್ಯಗಳಲ್ಲೂ ಬಾಳೆಹಣ್ಣು ಬೆಳೆಯುತ್ತಾರೆ. ಹೆಚ್ಚಾಗಿ, ಕರ್ನಾಟಕ, ಕೇರಳ, ಅಸ್ಸಾಂ, ತಮಿಳುನಾಡು, ಆಂಧ್ರ, ಹಾಗೂ ಪಶ್ಚಿಮ ಬಂಗಾಳದಲ್ಲಿ ಬೆಳೆಯುತ್ತಾರೆ. ಯೂರೋಪಿಯನ್ನರಲ್ಲಿ ಅಲೆಗ್ಸಾಂಡರ್- ಬಾಳೆಹಣ್ಣನ್ನು ಸವಿದ ಪ್ರಥಮನು. ಅವನು ತನ್ನ ದೇಶಕ್ಕೆ, ಬಾಳೆಹಣ್ಣನ್ನು ಪರಿಚಯಿಸಿದ. ಆಫ್ರಿಕ, ಈಜಿಪ್ಟ್ ನಿಂದ ಅರಬ್ ವರ್ತಕರು, ವಿಶ್ವದಾದ್ಯಂತ ಬಾಳೆಯನ್ನು ಮಾರಾಟಮಾಡಿ ಪ್ರಸಿದ್ಧಪಡಿಸಿದರು.

ನಮ್ಮ ದೇಶದ ಹಣ್ಣುಗಳ ಉತ್ಪಾದನೆಯಲ್ಲಿ ಎರಡನೆಯ ಸ್ಥಾನ ಪಡೆದಿರುವ ಹಣ್ಣು ಬಾಳೆ (ಮಾವು ಪ್ರಥಮ ಸ್ಥಾನ). ಭಾರತದಲ್ಲಿ ವಾರ್ಷಿಕ ಸುಮಾರು 29.7 ಮಿಲಿಯನ್ ಮೆಟ್ರಿಕ್ ಟನ್ ಬಾಳೆ ಹಣ್ಣು ಉತ್ಪಾದನೆಯಾಗುತ್ತದೆ.ಇದು ವರ್ಷವಿಡೀ ಲಭ್ಯ ಮಾತ್ರವಲ್ಲದೇ ಅನೇಕ ಔಷಧೀಯ ಗುಣಗಳನ್ನು ಇದು ಹೊಂದಿರುವುದು ವಿಶೇಷ. ಭಾರತವು ವಿಶ್ವದ ಸುಮಾರು 22% ಬಾಳೆಹಣ್ಣು ಬೆಳೆದು, ಉತ್ಪಾದನೆಯಲ್ಲಿ ವಿಶ್ವದಲ್ಲೇ ಮೊದಲ ಸ್ಥಾನಪಡೆದಿದೆ.

ಇಡೀ ದೇಶದ ಬಾಳೆಹಣ್ಣು ಉತ್ಪಾದನೆಯಲ್ಲಿ 3 ನೇ ಸ್ಥಾನದಲ್ಲಿರುವ ಕರ್ನಾಟಕ ರಾಜ್ಯದಲ್ಲಿ ವರ್ಷಕ್ಕೆ 12.77 ಲಕ್ಷ ಟನ್ ಬಾಳೆ ಉತ್ಪಾದನೆಯಾಗುತ್ತಿದೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಉತ್ಪಾದನೆಯಾಗುವ ಬಾಳೆಯನ್ನು ರಾಜ್ಯ ಮತ್ತು ಹೊರರಾಜ್ಯಗಳಲ್ಲಿ ಮಾರಾಟ ಮಾಡಲಾಗುತ್ತಿದೆ.

ಬಾಳೆಯ ವೈಜ್ಞಾನಿಕ ಹೆಸರು-ಮುಸಾಕಸ್ ಸಪೀಂಟಮ್. ಇದರ ತಳಿಗಳಲ್ಲಿ ಹಲವು ವಿಧ. ಪುಟ್ಟಬಾಳೆ, ಅಥವಾ ಪುಟ್ಟ ಬಿಳೀ ನಂಜನಗೂಡಿನ ರಸಬಾಳೆ, ಹೂ ಬಾಳೆ, ಪಚ್ಚ ಬಾಳೆ, ಏಲಕ್ಕಿ ಬಾಳೆ, ನೇಂದ್ರಬಾಳೆ, ಕದಳಿ ಬಾಳೆ, ಕಲ್ಲುಬಾಳೆ, ಬೂದುಬಾಳೆ, ಗಾಳಿ ಬಾಳೆ, ಮೈಸೂರು ಬಾಳೆ, ಕರಿಬಾಳೆ, ಏಲಕ್ಕಿ ಬಾಳೆ, ಚಂದ್ರ ಬಾಳೆ, ಬೆಂಗೂರು ಬೂದಿ, ಅವುಂಡೆ ಬಾಳೆ, ರಾಜ ಬಾಳೆ, ಸಾವಿರ ಕದಳಿ, ಉದಯಂ ಬಾಳೆ, ಬೆಂಕದಳಿ, ಕೆಂಪುಬಾಳೆ ಮೊದಲಾದವು.

ಬಾಳೆ ಇಲ್ಲದ ಬಾಳ್ವೆಯೇ- ಎಂದು ಕೇಳುವಷ್ಟು ಬಾಳೆಯ ಮಹತ್ವವಿದೆ
ಪ್ರತಿ 100 ಗ್ರಾಂ ನಲ್ಲಿ ಕಂಡು ಬರುವ ಮುಖ್ಯ ಪೌಷ್ಟಿಕಾಂಶಗಳು ಹೀಗಿವೆ: ಕಾರ್ಬೋಹೈಡ್ರೇಟ್‌ಗಳು 22.84 ಗ್ರಾಂ, ಸಕ್ಕರೆ 12.23 ಗ್ರಾಂ, ಆಹಾರದ ಫೈಬರ್ 2.6 ಗ್ರಾಂ, ಫ್ಯಾಟ್ 0.33 ಗ್ರಾಂ, ಪ್ರೋಟೀನ್ 1.09 ಗ್ರಾಂ, ಇವೇ ಅಲ್ಲದೆ, ಜೀವಸತ್ವ ಬಿ 6, ಸಿ, ಐರನ್ ಮೆಗ್ನೀಸಿಯಮ್, ಮ್ಯಾಂಗನೀಸ್, ರಂಜಕ, ಪೊಟಾಶಿಯಂ, ಸೋಡಿಯಂ ಸತು ಮೊದಲಾದ ಖನಿಜಾಂಶಗಳೂ ಬಾಳೆಹಣ್ಣಿನಲ್ಲಿ ಕಂಡುಬರುತ್ತವೆ.

ಇತ್ತೀಚಿನ ಸಂಶೋಧನೆಗಳ ಪ್ರಕಾರ, ೯೦ ನಿಮಿಷಗಳ ಶ್ರಮದಾಯಕ ಕೆಲಸಕ್ಕೆ ಬೇಕಾಗುವ ಶಕ್ತಿಯನ್ನು ಪೂರೈಸಲು, ಎರಡು ಬಾಳೆಹಣ್ಣುಗಳು ಸಾಕು. ಈ ಹಣ್ಣಿನಲ್ಲಿ ಶಕ್ತಿಯಜೊತೆಗೆ ನಾರಿನಂಶ, ಹಾಗೂ ಸುಕ್ರೋಸ್, ಗ್ಲೂಕೋಸ್ ಮತ್ತು ಫ್ರುಕ್ಟೋಸ್ ಎಂಬ ೩ ವಿಧದ ಪ್ರಾಕೃತಿಕ ಸಕ್ಕರೆಗಳಿವೆ.

ಪ್ರತಿದಿನ ಇದರ ಸೇವನೆಯಿಂದ, ಅನಾರೋಗ್ಯ ಸಂಬಂಧೀ ಹತ್ತು ಹಲವು ಸಮಸ್ಯೆಗಳಿಂದ ದೂರವಿರಬಹುದಂತೆ. ಮೈಂಡ್ ಸಂಸ್ಥೆ, ಇತ್ತೀಚೆಗೆ ನಡೆಸಿದ, ಸರ್ವೇಕ್ಷಣೆಯ ಪ್ರಕಾರ, ಖಿನ್ನತೆಗೆ ಒಳಗಾದವರು ಒಂದು ಬಾಳೆಹಣ್ಣನ್ನು ಸೇವಿಸಿದ ಬಳಿಕ ಹೆಚ್ಚಿನವರಲ್ಲಿ ಸುಧಾರಣೆ ಕಂಡುಬಂದಿದೆ. ಟ್ರಿಪ್ಟೋಫ್ಯಾನ್ ಎಂಬ ಪ್ರೋಟೀನ್ ಇದಕ್ಕೆ ಕಾರಣ. ಬಾಳೆಹಣ್ಣಿನಲ್ಲಿರುವ ಬಿ-೬ ರಕ್ತದಲ್ಲಿನ ಗ್ಲೂಕೋಸ್ ಪ್ರಮಾಣವನ್ನು ಸಮಸ್ಥಿತಿಯಲ್ಲಿರಿಸಿ, ನಮ್ಮ ಮನಸ್ಥಿತಿಯ ಮೇಲೆ ಪರಿಣಾಮವನ್ನುಂಟುಮಾಡುತ್ತದೆ. ಬಾಳೆಹಣ್ಣಿನಲ್ಲಿ ಕಬ್ಬಿಣದ ಅಂಶ ಸಮೃದ್ಧವಾಗಿರುವುದರಿಂದ ದೇಹದಲ್ಲಿ ಕೆಂಪು ರಕ್ತಕಣಗಳ ಉತ್ಪಾದನೆಯನ್ನು ಪ್ರಚೋದಿಸಿ, ರಕ್ತಹೀನತೆಯನ್ನು ನೀಗಿಸುತ್ತದೆ. ಬಾಳೆಹಣ್ಣಿನಲ್ಲಿ ಪೊಟಾಶಿಯಂ, ಲವಣ ಸಮೃದ್ಧಿಯಾಗಿದ್ದು, ಉಪ್ಪಿನ ಅಂಶ ತೀರಾ ಕಡಿಮೆ. ಇದರಿಂದ ಬಾಳೆಹಣ್ಣು ರಕ್ತದೊತ್ತಡವನ್ನು ತಡೆಗಟ್ಟಲು ಸೂಕ್ತ ಅಸ್ತ್ರ. ಬಾಳೆಹಣ್ಣಿನಲ್ಲಿ ನಾರಿನ ಅಂಶ ಯಥೇಚ್ಛ. ಹೀಗಾಗಿ ಕೃತಕ ವಿರೇಚಕಗಳಿಲ್ಲದೆ, ಮಲಬದ್ಧತೆಯ ಸಮಸ್ಯೆಯನ್ನು, ಹೋಗಲಾಡಿಸಲು ಬಾಳೆಹಣ್ಣಿನ ಸೇವನೆ ಅತ್ಯಂತ ಸಹಾಯಕಾರಿ.

ಜೇನುತುಪ್ಪವನ್ನು ಸೇರಿಸಿದ ಬಾಳೆಹಣ್ಣಿನ ಮಿಲ್ಕ್ ಶೇಕ್ ಒಂದು ದಿವ್ಯ ಪಾನಕ. ಜಠರದಲ್ಲಿ, ಸಹಜ ಪ್ರತ್ಯಾಮ್ಲೀಯ ಪರಿಣಾಮವನ್ನುಂಟುಮಾಡಿ. ಎದೆಯುರಿಯಿಂದ ಪರಿತಪಿಸುತ್ತಿರುವವರಿಗೂ ಬಾಳೆಹಣ್ಣು ದಿವ್ಯೌಷಧ. ಗರ್ಭಿಣಿಸ್ತ್ರೀಯರಿಗೆ ಎರಡು ಊಟಗಳ ಮಧ್ಯೆ ಒಂದು ಬಾಳೆಹಣ್ಣನ್ನು ಕೊಡುವುದರಿಂದ ವಾಕರಿಕೆ, ವಾಂತಿ ತಡೆಗಟ್ಟಬಹುದು. ಈ ಹಣ್ಣು ಬೆಳಗಿನ ಆರೋಗ್ಯದ ಏರುಪೇರುಗಳನ್ನು ನಿಯಂತ್ರಣದಲ್ಲಿಡುತ್ತದೆ.

ಗರ್ಭಿಣಿ ಸ್ತ್ರೀಯರು ಬಾಳೆಹಣ್ಣಿನ ಸೇವನೆಯನ್ನು ಮಾಡುವುದರಿಂದ ಅವರ ದೇಹ ಮತ್ತು ಮನಸ್ಸುಗಳೆರಡರ ಉಷ್ಣತೆ ಕಡಿಮೆಯಾಗಿ, ಹುಟ್ಟಿದ ಮಗುವಿನ ದೇಹ ಮತ್ತು ಮನಸ್ಸುಗಳು ಶಾಂತವಾಗಿರುವುದೆಂಬ ನಂಬಿಕೆ ಇದೆ.

ಬಾಳೆಹಣ್ಣಿನಲ್ಲಿ ಬಿ ವಿಟಮಿನ್ ಸಮೃದ್ಧಿಯಾಗಿರುವುದರಿಂದ ನರವ್ಯೂಹದ ಶಾಂತತೆ ಕಾಪಾಡುವುದರಲ್ಲಿ ಸಹಕಾರಿ. ಆಮ್ಲೀಯತೆಯನ್ನು ತಗ್ಗಿಸುತ್ತದೆ. ಜಠರದ ಪೊರೆಯನ್ನು ಮರುಲೇಪಿಸುವ ಮೂಲಕ, ಅಲ್ಸರ್ ತೊಂದರೆಯನ್ನು ಶಮನಗೊಳಿಸುತ್ತದೆ. ಅತೀವ ಒತ್ತಡದಲ್ಲಿ ಕೆಲಸಮಾಡುವವರು, ಕಾರ್ಬೋಹೈಡ್ರೇಟ್ ಹೆಚ್ಚಾಗಿರುವ ಬಾಳೆಹಣ್ಣುಗಳ ಸೇವನೆಯಿಂದ ರಕ್ತದ ಸಕ್ಕರೆಯ ಪ್ರಮಾಣವನ್ನು ಕಾಯ್ದುಕೊಳ್ಳಬಹುದು. ಧೂಮಪಾನ ಹಾಗೂ ತಂಬಾಕುಸೇವನೆ ಬಿಡುವವರಿಗೆ ಬಾಳೆಹಣ್ಣಿನ ಸೇವನೆ ಉಪಯುಕ್ತ,. ಈ ಹಣ್ಣಿನಲ್ಲಿರುವ ಬಿ-೬, ಬಿ-೧೨ ವಿಟಮಿನ್ ಗಳು ಹಾಗೂ ಪೊಟಾಶಿಯಂ, ಮೆಗ್ನೀಶಿಯಮ್ ಅಂಶಗಳು, ನಿಕೋಟಿನ್ನಿನ ಸೆಳೆತದಿಂದ ಹೊರಬರುವಾಗ ದೇಹದ ಮೇಲಾಗುವ ಪರಿಣಾಮಗಳನ್ನು ನಿಭಾಯಿಸಲು ದೇಹಕ್ಕೆ ಸಹಾಯಮಾಡುತ್ತವೆ.

ಪ್ರಪಂಚದ ಮುಂಚೂಣಿಯಲ್ಲಿರುವ ಕ್ರೀಡಾಳುಗಳ ಪ್ರಥಮ ಆದ್ಯತೆ, ಸೇಬು. ನಂತರ ಬಾಳೆಹಣ್ಣು. ಇದರಲ್ಲಿ, ೪ ರಷ್ಟು ಪ್ರೋಟಿನ್, ಎರಡುಪಟ್ಟು ಕಾರ್ಬೊ ಹೈಡ್ರೇಟ್, ೩ ಪಟ್ಟು ಫಾಸ್ಫರಸ್ ಹಾಗೂ ಖನಿಜಗಳಿವೆ. ಪೊಟಾಶಿಯಂ ಅಂಶ ಕೂಡ ಸಮೃದ್ಧವಾಗಿದೆ. ಪೊಟಾಶಿಯಂ ಹೃದಯದ ಬಡಿತವನ್ನು ನಿಯಂತ್ರಿಸುತ್ತದೆ. ಮೆದುಳಿಗೆ ಆಮ್ಲಜನಕವನ್ನು ಪೂರೈಸುತ್ತದೆ. ದೇಹದ ನೀರಿನ ಪ್ರಮಾಣವನ್ನು ಸರಿದೂಗಿಸುತ್ತದೆ. "ಹೊತ್ತಲ್ಲದ ಹೊತ್ತಿನಲ್ಲಿ ಸಿಕ್ಕಿದ್ದನ್ನು ತಿನ್ನುವ ಬದಲು ಬಾಳೆಹಣ್ಣಿನ ಸೇವನೆ ಮಾಡಿದರೆ ಖಂಡಿತವಾಗಿಯೂ ನಮ್ಮ ದೇಹ ಸುಸ್ಥಿತಿಯಲ್ಲಿರುವುದು ಎಂದು ವೈದ್ಯರು ಹೇಳುತ್ತಾರೆ. ಬಾಳೆಯನ್ನು ಬಳಸಿಕೊಂಡು ಜ್ಯೂಸ್, ತಿಂಡಿಯನ್ನು ತಯಾರಿಸುವ ಕಾರ್ಖಾನೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಸಿಪ್ಪೆ ಸಂಗ್ರಹವಾಗುತ್ತದೆ. ಈ ಸಿಪ್ಪೆಯನ್ನು ಸಾಮಾನ್ಯವಾಗಿ ಬಿಸಾಡಲಾಗುತ್ತದೆ. ಆದರೆ, ಅದೇ ಕಾರ್ಖಾನೆಯಲ್ಲಿ ಅದೇ ಬಾಳೆಹಣ್ಣು ಸಿಪ್ಪೆಯನ್ನು ಬಳಸಿಕೊಂಡು ಜ್ಯೂಸ್ ತಯಾರಿಸುವ ತಂತ್ರಜ್ಞಾನವನ್ನು ಮೈಸೂರಿನ ಕೇಂದ್ರೀಯ ಆಹಾರ ತಂತ್ರಜ್ಞಾನ ಮತ್ತು ಸಂಶೋಧನಾ ಸಂಸ್ಥೆ (ಸಿಎಫ್‌ಟಿಆರ್‌ಐ) ವಿಜ್ಞಾನಿಗಳು ಸಂಶೋಧಿಸಿದ್ದಾರೆ. ಈ ತಂತ್ರಜ್ಞಾನದ ಮೂಲಕ ರುಚಿಕರವಾದ, ನಾರುಯುಕ್ತವಾದ ಆರೋಗ್ಯಕರ ಆಹಾರ ಸೇವನೆಯೂ ಆದಂತೆ ಆಗುತ್ತದೆ. ಈ ನಾರಿನ ಅಂಶ ದೇಹಕ್ಕೆ ಒಳ್ಳೆಯದು. ಇದು ಮುಖ್ಯವಾಗಿ ಪಚನ ಕ್ರಿಯೆಗೆ ಅತ್ಯಗತ್ಯವಾದ ಅಂಶ. ಈ ನಾರಿನ ಅಂಶವುಳ್ಳ ಪಾನೀಯವನ್ನು ಸೇವಿಸಿದರೆ ಜೀರ್ಣಾಂಗದ ಸಮಸ್ಯೆಗಳು ಕಡಿಮೆಯಾಗುತ್ತವೆ.

ಬಾಳೆಗಿಡದ ಬೇರಿನಿಂದ ಹೂವಿನ ವರೆಗೆ ಎಲ್ಲಾ ಭಾಗಗಳೂ ಉಪಯುಕ್ತ. ಬರೀ ಆಹಾರಕ್ಕೆ ಮಾತ್ರವಲ್ಲ, ಬಾಳೆ ನಾರಿನಿಂದ ಇತ್ತೀಚೆಗೆ ಬಟ್ಟೆಗಳನ್ನೂ ತಯಾರಿಸಲಾಗುತ್ತಿದೆ. ಇಂತಹ ಬಹೂಪಯೋಗಿ ಬಾಳೆಗಿಡವನ್ನು ಮನೆಗಳಲ್ಲಿ, ತೋಟಗಳಲ್ಲಿ ಬೆಳೆಸೋಣ!!



ಛಾಯಾ ಓಕ್ ಬಾಪಟ್

ವ್ಯಕ್ತಿ ವಿಶೇಷ ಮಾಲಿಕೆ

# ಮಹಾಮಂಡಲೇಶ್ವರಿ ರಾಣಿ ಚೆನ್ನಭೈರಾದೇವಿ

- ಕೆ ಜನಾರ್ದನ ತುಂಗ



(ಚಿತ್ರ ಸೌಜನ್ಯ : ಗಜಾನನ ಶರ್ಮ ಅವರ ಕರಿಮೆಣಸಿನ ರಾಣಿಯ ಅಕಳಂಕ ಚರಿತೆ ಪುಸ್ತಕದ ಮುಖಪುಟದಿಂದ)

"ನಾವು ಆಕೆಯ ಜೊತೆ ಅತ್ಯಂತ ಎಚ್ಚರದಿಂದ ಮತ್ತು ನಾಜೂಕಿನಿಂದ ವ್ಯವಹರಿಸಬೇಕು. ಸಜ್ಜನಿಕೆ, ವಿನಯಶೀಲತೆ ಮತ್ತು ನಯನಾಜೂಕುಗಳಿಂದ ಮಾತ್ರ ಆಕೆಯನ್ನು ನಮ್ಮ ಕಡೆ ಸೆಳೆದುಕೊಳ್ಳಬಹುದು" ಎಂದು ಕ್ರಿ. ಶ. 1591ರ ಪೋರ್ಚುಗೀಸರ ದಾಖಲೆಗಳಲ್ಲಿ ರಾಣಿ ಚೆನ್ನಭೈರಾದೇವಿಯ ಬಗ್ಗೆ ಬರೆಯಲಾಗಿದೆ. ಇದಕ್ಕೆ ಕಾರಣಗಳಿಲ್ಲದಿಲ್ಲ. ಪೋರ್ಚುಗೀಸರು ತಮ್ಮ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ದಕ್ಷಿಣದ ಕರಾವಳಿಯ ಬಂದರುಗಳನ್ನು ವಶಪಡಿಸಿಕೊಂಡು ಸಂಬಾರ ಪದಾರ್ಥಗಳ ವ್ಯಾಪಾರವನ್ನು ನಿಯಂತ್ರಿಸಲು ಗೇರುಸೊಪ್ಪೆ ಸಂಸ್ಥಾನದ ಮೇಲೆ 1559 ಮತ್ತು 1570ರಲ್ಲಿ ಎರಡು ಬಾರಿ ಯುದ್ಧ ಸಾರಿದ್ದರು. ಆದರೆ ಎರಡು ಬಾರಿಯೂ ಅವರು ಸೋತು ಹಿಂದಿರುಗಬೇಕಾಯಿತು. ವೈರಿಗಳ ಪಾಲಿಗೆ ಆಕೆ ಭೈರವಿಯೇ ಆಗಿದ್ದಳು.

ಪೋರ್ಚುಗೀಸರನ್ನು ಕಾಳಿನದಿಯ ದಕ್ಷಿಣ ತಟಕ್ಕೆ ಕಾಲಿಡದಂತೆ ತಡೆದಿದ್ದರೂ ಅವರೊಂದಿಗೆ ವ್ಯಾಪಾರವನ್ನು ಮುಂದುವರಿಸಿದ ವ್ಯವಹಾರಚತುರೆ, ಈಕೆ. ಪೋರ್ಚುಗೀಸರು ಈಕೆಯನ್ನು "ಕಾಳುಮೆಣಸಿನ ರಾಣಿ" ಎಂದು ಕರೆದರು. ಅವರ ದಮನಕಾರಿ ಕೃತ್ಯಗಳಿಂದ ತನ್ನ ರಾಜ್ಯಕ್ಕೆ ವಲಸೆ ಬಂದ ಹಿಂದುಳಿದ ಜನಾಂಗದ ಖಾರ್ವಿಗಳಿಗೆ ಆಶ್ರಯ ನೀಡಿ ಅವರಿಂದ "ಅವ್ವರಸಿ" ಎಂದು ಕರೆಯಿಸಿಕೊಂಡಳು. ಸಾರಸ್ವತ ಜನಾಂಗದ ಜನರಿಗೆ ಆಕೆ ನೀಡಿದ ಆಶ್ರಯತಾಣದ ಹೆಸರೇ ಅವ್ವರಸಿ – ಅವರ್ಸಾ ಆಯಿತು. ಆಶ್ರಯ ಬೇಡಿ ಬಂದ ಜನರು ಇವಳನ್ನು ಪ್ರೀತಿಯಿಂದ ಸಣ್ಣಮ್ಮ ಎಂದು ಕರೆದರು. ಇತಿಹಾಸಕಾರರು ಸಂಪತ್ತು ಮತ್ತು ಪ್ರಭಾವಗಳ ನೆಲೆಯಲ್ಲಿ ಇಂಗ್ಲೆಂಡಿನ ರಾಣಿ ಎಲಿಜಬೆತ್‌ಜೊತೆಗೆ ಹೋಲಿಕೆ ಮಾಡಿದರು. 54 ವರ್ಷಗಳ ಕಾಲ ರಾಣಿಯಾಗಿ ಸಂಸ್ಥಾನವನ್ನು ಆಳಿದರೂ ಜಿನ ಶ್ರಾವಕಿಯಂತೆ ಬದುಕು ಸವೆಸಿದಳು. ಎಂದಿಗೂ ಕಿರೀಟವನ್ನು ತೊಡದೆ "ಜಿನ" ಸಾಮಾನ್ಯರಂತೆ ಬದುಕಿದಳು.

ದಕ್ಷಿಣದಲ್ಲಿ ಇಂದಿನ ಕುಂದಾಪುರದ ಬಳಿಯ ತ್ರಾಸಿಯಿಂದ ಉತ್ತರದ ಸದಾಶಿವಗಡದ ವರೆಗೆ ಪಶ್ಚಿಮ ಸಾಗರದಿಂದ ಪೂರ್ವದಲ್ಲಿ ಸಾಗರದ ಸಮೀಪದ ಆನವಳ್ಳಿಯ ವರೆಗಿನ ಕರಾವಳಿ ಮತ್ತು ಮಲೆನಾಡುಗಳ ಸಸ್ಯಸಮೃದ್ಧ ಪ್ರದೇಶವನ್ನು ವಿಜಯನಗರ ಅರಸರ ಮಾಂಡಳಿಕರಾಗಿದ್ದ ಸಾಳುವ ವಂಶದ ದೊರೆಗಳು ಆಳುತ್ತಿದ್ದರು. ಹದಿನೈದು ಮತ್ತು ಹದಿನಾರನೆಯ ಶತಮಾನದಲ್ಲಿ ಗೇರುಸೊಪ್ಪೆ ಮತ್ತು ಹಾಡುವಳ್ಳಿ ಅಥವ ಸಂಗೀತಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಈ ವಂಶದ ಎರಡು ಕವಲುಗಳು ಅಧಿಕಾರದಲ್ಲಿದ್ದವು. ಗೇರುಸೊಪ್ಪೆಯ ರಾಜನಾದ ಕೃಷ್ಣ ದೇವರಸನು (ಇಮ್ಮಡಿ ದೇವರಾಯ) ಪೋರ್ಚುಗೀಸರ ವಿರುದ್ಧ ನಡೆದ ಯುದ್ಧದಲ್ಲಿ ಮೃತನಾದಾಗ ಆತನ ಪತ್ನಿ ಭೈರಾದೇವಿ ರಾಜ್ಯಭಾರವನ್ನು ವಹಿಸಿಕೊಂಡಳು. ಕಾಲಕ್ರಮದಲ್ಲಿ ನಡೆದ ಇನ್ನೊಂದು ಯುದ್ಧದಲ್ಲಿ ಪೋರ್ಚುಗೀಸರು ಭಟ್ಕಳವನ್ನು ಸುಟ್ಟು ಭಸ್ಮ ಮಾಡಿಬಿಟ್ಟರು. ಭೈರಾದೇವಿಯೂ ಮೃತಳಾಗುವ ಸಮಯದಲ್ಲಿ ಆಕೆಯ ತಂಗಿ ಚೆನ್ನಭೈರಾದೇವಿ ಹಾಡುವಳ್ಳಿಯ ಮೂಲಕ ರಾಜ್ಯವಾಳುತ್ತಿದ್ದಳು. ಮಾತೃಪ್ರಧಾನ ವ್ಯವಸ್ಥೆಯ ಕಾರಣದಿಂದ ಗೇರುಸೊಪ್ಪೆಯ ಆಡಳಿತದ ಜವಾಬ್ದಾರಿ ಕೂಡ ತಂಗಿಯ ಹೆಗಲಿಗೆ ಬಿದ್ದಿತು. ಹೀಗಾಗಿ, ಹಾಡುವಳ್ಳಿ ಮತ್ತು ಗೇರುಸೊಪ್ಪೆ ಸಂಸ್ಥಾನಗಳನ್ನು ಮತ್ತೆ ಒಗ್ಗೂಡಿಸಿದ ರಾಣಿ ಎಂತಲೂ ಈಕೆಯನ್ನು ಸ್ಮರಿಸುತ್ತಾರೆ.

ತನ್ನ ಆಡಳಿತಾವಧಿಯಲ್ಲಿ ಆಕೆ ಎಂದಿಗೂ ಇತರ ರಾಜ್ಯಗಳ ಮೇಲೆ ಆಕ್ರಮಣ ಮಾಡಲಿಲ್ಲ. ಬದಲಾಗಿ ಬಸ್ರೂರು, ಹೊಸಂಗಡಿ ಮುಂತಾದ ಸಣ್ಣಪುಟ್ಟ ಪ್ರದೇಶಗಳ ಜೊತೆ ಉತ್ತಮ ಸಂಬಂಧವನ್ನಿರಿಸಿಕೊಂಡು ತನ್ನ ರಾಜ್ಯದ ಮೂಲಕ ವ್ಯಾಪಾರ ಮಾಡಲು ಅವಕಾಶ ಮಾಡಿಕೊಟ್ಟಳು. ಬಿಳಗಿ ಸಂಸ್ಥಾನದ ರಾಜರು ಗೇರುಸೊಪ್ಪೆಯ ಮೇಲೆ ಸದಾ ಕತ್ತಿ ಮಸೆಯುತ್ತಿದ್ದರೂ ಆ ಸಂಸ್ಥಾನದ ವ್ಯಾಪಾರಿಗಳಿಗೆ ತನ್ನ ರಾಜ್ಯದಲ್ಲಿ ವ್ಯಾಪಾರವನ್ನು ಮಾಡುವಾಗ ಹೆಚ್ಚಿನ ಸುಂಕವನ್ನು ವಿಧಿಸಲಿಲ್ಲ.

ಕರಾವಳಿಯಲ್ಲಿ ಮಲಬಾರಿನ ವರೆಗೂ ಆಕೆಯ ವ್ಯಾಪಾರ ಸಂಬಂಧವಿತ್ತು. ಭಟ್ಕಳದ ಬಂದರಿನಲ್ಲಿ ಪ್ರತಿವರ್ಷ ಆಯಾತವಾಗುತ್ತಿದ್ದ 10 ರಿಂದ 15 ಸಾವಿರ ಅರಬ್ಬೀ ಕುದುರೆಗಳ ಬಹುಪಾಲನ್ನು ವಿಜಯನಗರದ ಅರಸರು ಖರೀದಿಸುತ್ತಿದ್ದರು. ಗೋವಾದ ಜೊತೆಗಂತೂ ಆಕೆಯ ವ್ಯಾವಹಾರಿಕ ಸಂಬಂಧ ಉತ್ತಮವಾಗಿತ್ತು; ಆದರೂ ಪೋರ್ಚುಗೀಸರಿಗೆ ತನ್ನ ಬಂದರುಗಳ ನಿಯಂತ್ರಣವನ್ನಾಗಲಿ ರಾಜ್ಯದೊಳಗೆ ನೇರವಾಗಿ ವ್ಯಾಪಾರ ಮಾಡುವ ಅವಕಾಶವನ್ನಾಗಲಿ, ಆಕೆ ಕೊಡಲಿಲ್ಲ. ಕೊಚ್ಚಿನ್ ಬಂದರಿನ ಕ್ಯಾಪ್ಟನ್ ಆಲ್ಫೋನ್ಸೋ ಮೆಕ್ಸಿಯ, ಪೋರ್ಚುಗೀಸ್ ರಾಜನಿಗೆ ಬರೆದ ಪತ್ರದಲ್ಲಿ "ಭಟ್ಕಳ ಮತ್ತು ಗೋವಾಗಳ ನಡುವೆ ಇರುವ ಕಾನೂರು, ಮಿರ್ಜಾನ್ ಮತ್ತು ಅಂಕೋಲಾಗಳೆಂಬ ಜಾಗಗಳಲ್ಲಿ ವಾರ್ಷಿಕ ೫000 ಕ್ರೂಸೇಡೋಸ್ (ಪೋರ್ಚುಗೀಸ್ ಬಂಗಾರದ ನಾಣ್ಯ) ಗಳಷ್ಟು ಕಾಳು ಮೆಣಸು ರಫ್ತಾಗುತ್ತಿದೆ. ಈ ಜಾಗಗಳು ಗೇರುಸೊಪ್ಪೆಯ ರಾಣಿ ಚೆನ್ನಭೈರಾದೇವಿಯ ಆಳ್ವಿಕೆಗೆ ಒಳಪಟ್ಟಿವೆ. ಈ ಕಾಳುಮೆಣಸು ಕೊಚ್ಚಿನ್ನಿನ ಕಾಳುಮೆಣಸಿಗಿಂತ ದಪ್ಪವೂ, ಕಮ್ಮಿ ತೂಕ ಮತ್ತು ಖಾರದ್ದೂ ಆಗಿವೆ. ಈ ಜಾಗಗಳನ್ನು ನಮ್ಮ ವಶಕ್ಕೆ ಪಡೆಯಬೇಕು" ಎಂದು ಬರೆದಿದ್ದಾನೆ. ಇದರಿಂದ ಗೇರುಸೊಪ್ಪೆಯು ಪೋರ್ಚುಗೀಸರಿಗೆ ಎಷ್ಟು ಮಹತ್ವದ್ದಾಗಿತ್ತು ಎಂಬುದೂ ತಿಳಿಯುತ್ತದೆ.

ಆ ಕಾಲದಲ್ಲೊಮ್ಮೆ ಐರೋಪ್ಯ ದೇಶಗಳಲ್ಲಿ ಕಾಳುಮೆಣಸಿನ ಕುರಿತು ಅಪಪ್ರಚಾರ ತೀವ್ರವಾಗಿ ಬಿಳಿಮೆಣಸಿನ ಬಳಕೆ ಅತಿಯಾಯಿತು. ಭಾರತದ ಇತರ ರಾಜ್ಯಗಳು ಇದರಿಂದಾಗಿ ಹಿನ್ನಡೆ ಅನುಭವಿಸಿದಾಗ ಚೆನ್ನಭೈರಾದೇವಿಯು ಉತ್ತಮ ದರ್ಜೆಯ ಬಿಳಿ ಮೆಣಸನ್ನು ತಯಾರಿಸುವ ವಿನೂತನ ವಿಧಾನವನ್ನು ಅನುಸರಿಸಿದಳು. ತನ್ನ ರಾಜ್ಯದಲ್ಲಿ 500ಕ್ಕೂ ಹೆಚ್ಚು ಬಾವಿಗಳನ್ನು ತೋಡಿಸಿ ಅದರಲ್ಲಿ ಕರಿಮೆಣಸನ್ನು ಮೂರುದಿನ ಮುಳುಗಿಸಿಟ್ಟು ಅದರ ಕೊಳೆತ ಸಿಪ್ಪೆಯನ್ನು ಸುಲಿದು ಉತ್ಕೃಷ್ಟ ದರ್ಜೆಯ ಬಿಳಿಮೆಣಸನ್ನು ಗೇರುಸೊಪ್ಪೆ ಸಂಸ್ಥಾನದಲ್ಲಿ ತಯಾರಿಸಲಾಗುತ್ತಿತ್ತು. ಕಾಳುಮೆಣಸಿನ ಜೊತೆಗೆ ದಾಲ್ಚಿನ್ನಿ, ಶುಂಠಿ, ಬೆಲ್ಲ, ಅಡಿಕೆ ಮುಂತಾದ ಅನೇಕ ಕೃಷ್ಯುತ್ಪನ್ನಗಳನ್ನು ಗೇರುಸೊಪ್ಪೆಯ ಬಂದರುಗಳಿಂದ ರಫ್ತು ಮಾಡಲಾಗುತ್ತಿತ್ತು. ಇದರಿಂದ ಕೃಷಿಕರು ಸಂತುಷ್ಟರಾಗಿದ್ದರು. ಆಕೆಯ ಕಾಲದಲ್ಲಿ ರಾಜ್ಯವು ವಿಜಯನಗರಕ್ಕಿಂತ ಶ್ರೀಮಂತವಾಗಿತ್ತು ಎಂದು ಹೇಳುತ್ತಾರೆ.

ತನ್ನ ರಾಜ್ಯದಿಂದ ರಫ್ತಾಗುವ ಸರಕುಗಳಿಗೆ ಬಂಗಾರವನ್ನು ವಿನಿಮಯ ಮಾಡಿಕೊಳ್ಳುವ ವ್ಯವಸ್ಥೆಯನ್ನು ಜಾರಿಗೆ ತಂದಳು. ಒಂದು ಕಾಲಘಟ್ಟದಲ್ಲಿ ಸ್ಪೈನ್‌ದೇಶಕ್ಕೆ ದಕ್ಷಿಣ ಅಮೆರಿಕಾದಲ್ಲಿ ಬೆಳ್ಳಿಯ ಗಣಿ ದೊರೆತ ವಿಚಾರವನ್ನರಿತ ರಾಣಿ ವಿನಿಮಯವನ್ನು ಬಂಗಾರಕ್ಕೆ ಬದಲಾಗಿ ಬೆಳ್ಳಿಗೆ ಬದಲಾಯಿಸಿದಳು. ಇದರಿಂದ ಭಾರತದಲ್ಲಿ ಗೇರುಸೊಪ್ಪೆಯು ಬೆಳ್ಳಿಯ ಖಜಾನೆಯಾಯಿತು.

ರಾಜ್ಯದಲ್ಲಿ ಮತಾಂತರವನ್ನು ನಿರ್ಬಂಧಿಸಲು ರಾಣಿಯು ಕ್ರೈಸ್ತ ಪಾದರಿಗಳ ಪ್ರವೇಶವನ್ನು ನಿರ್ಬಂಧಿಸಿದ್ದಳು. ಆಕೆ ಮತಾಂತರದ ವಿರೋಧಿಯಾಗಿದ್ದರೂ ಅದಾಗಲೇ ಮತಾಂತರವಾಗಿದ್ದ ದುರ್ಬಲರಿಗೆ ಆಶ್ರಯ ನೀಡಿದಳು. ಕರ್ನಾಟಕ ಶಬ್ದಾನುಶಾಸನ ಕೃತಿಯನ್ನು ಬರೆದ ಜೈನ ಮುನಿ, ಭಟ್ಟಾಕಳಂಕ ಈಕೆಯ ಗುರು. ಗುರುವಿನ ಬೋಧನೆಗನುಗುಣವಾಗಿ ತನ್ನ ರಾಜ್ಯದ ಎಲ್ಲ ಪ್ರಜೆಗಳನ್ನೂ ಸಮಾನವಾಗಿ ಪರಿಗಣಿಸಿದ್ದಳು. ಜೈನ ಬಸದಿಗಳು ಮತ್ತು ಹಿಂದೂ ದೇವಾಲಯಗಳ ನಿರ್ಮಾಣ, ಪುನರುಜ್ಜೀವನ ಮತ್ತು ಪೂಜಾಕೈಂಕರ್ಯಗಳಿಗೆ ದತ್ತಿಗಳನ್ನು ನೀಡಿದಳು.

ಇಂತಹ ಸುಭಿಕ್ಷವಾದ ರಾಜ್ಯದ ಮೇಲೆ ನೆರೆಹೊರೆಯ ಸಂಸ್ಥಾನಗಳ ಕಣ್ಣು ಬೀಳುವುದು ಸಹಜ. ಅದರಲ್ಲಿಯೂ ನೆರೆಯ ಕೆಳದಿ ಸಂಸ್ಥಾನಕ್ಕೆ ತನ್ನ ಉತ್ಪನ್ನಗಳನ್ನು ರಫ್ತು ಮಾಡಲು ಯಾವುದೇ ಬಂದರುಗಳಿಲ್ಲ. ಆದುದರಿಂದ ಕೇವಲ ವಾಣಿಜ್ಯಕ ಕಾರಣಗಳಿಂದ ಬಿಳಗಿ ಮತ್ತು ಕೆಳದಿ ಅರಸರು ಒಟ್ಟಾಗಿ 1606ರಲ್ಲಿ ಗೇರುಸೊಪ್ಪೆಯ ಮೇಲೆ ಯುದ್ಧ ಸಾರಿದರು. ವಯೋವೃದ್ಧ ರಾಣಿ ತನ್ನ ಸೇನಾಪತಿ ಗೊಂಡನಾಯಕ ಮಾಡಿದ ದ್ರೋಹಕ್ಕೆ ಬಲಿಯಾಗಿ ಸೋಲಬೇಕಾಯಿತು. ಕೆಳದಿಯ ಅರಸ ಹಿರಿಯ ವೆಂಕಟಪ್ಪ ನಾಯಕ ಕೈಸೆರೆಯಾಗಿ ಸಿಕ್ಕಿದ ರಾಣಿಯನ್ನು ನಗಿರೆಯ ಸೆರೆಮನೆಯಲ್ಲಿ ಬಂಧನದಲ್ಲಿರಿಸಿದ. ಚೆನ್ನಭೈರಾದೇವಿಯು ಸೆರೆಮನೆಯಲ್ಲಿಯೇ ಸಲ್ಲೇಖನ ವ್ರತವನ್ನು ಪಾಲಿಸಿ ಜಿನೈಕ್ಯಳಾದಳು.

ಗೇರುಸೊಪ್ಪೆಯ ಶ್ರೀಮಂತ ರಾಜ್ಯವನ್ನು 54 ವರ್ಷಗಳಷ್ಟು ದೀರ್ಘಕಾಲ ಆಳಿದರೂ ಆಕೆ ನಿರ್ಮೋಹಿಯಾಗಿದ್ದಳು. ಅವಿವಾಹಿತೆಯಾಗಿಯೇ ಬದುಕಿದ ಆಕೆ, ಗುರುವೇ ಸೂಚಿಸಿದರೂ ತನ್ನ ಉತ್ತರಾಧಿಕಾರಿಯನ್ನು ನೇಮಿಸಲಿಲ್ಲ. ಆಕೆಯ ಪ್ರೋತ್ಸಾಹದಿಂದ ನಿರ್ಮಾಣವಾದ ಅನೇಕ ಗುಡಿ ಗೋಪುರಗಳು, ಕೋಟೆ ಕೊತ್ತಲಗಳು, ಕಾಲನ ಹೊಡೆತಕ್ಕೆ, ಜನರ ನಿರ್ಲಕ್ಷ್ಯಕ್ಕೆ, ಪರಕೀಯರ ಆಕ್ರಮಣಕ್ಕೆ ಸಿಕ್ಕಿ ನಾಶವಾದರೂ ಕಾರ್ಕಳದ ಚತುರ್ಮುಖ ಬಸದಿ, ಮಿರ್ಜಾನ್‌ಕೋಟೆ, ಗೇರುಸೊಪ್ಪೆ ಮತ್ತು ಸೋಂದೆಯ ಬಸದಿಗಳು, ಅವರ್ಸಾದಲ್ಲಿರುವ ಕಾತ್ಯಾಯನಿ ದೇವಾಲಯ ಮತ್ತು ಅನೇಕ ಪಾಳುಬಿದ್ದ ಸ್ಥಳಗಳು ಆಕೆಯ ಆಡಳಿತದ ವೈಭವವನ್ನು ಇಂದಿಗೂ ಸಾರುತ್ತಿವೆ.

# ತ್ಯಾಜ್ಯರಹಿತ ವ್ಯವಸ್ಥೆಗಾಗಿ ಸ್ವದೇಶಿ ಮೇಳದಲ್ಲಿ ಅದಮ್ಯ ಚೇತನದ ವಿಶಿಷ್ಟ ಪ್ರಯೋಗ

ವೈವಿಧ್ಯಮಯ ಫಲಕ ಹೊಂದಿರುವ ತಿಂಡಿ - ತಿನಿಸು ಮಳಿಗೆಗಳ ಸಾಲು. ಒಂದಕ್ಕಿಂತ ಒಂದು ಆಕರ್ಷಕ ಎನ್ನುವಂತೆ ಘಮಘಮಿಸುವ ಭಕ್ಷ್ಯಗಳು. ಯಾವುದು ಮೊದಲು ತಿನ್ನುವುದು ಎಂದು ತೀರ್ಮಾನಿಸಿ ಟೋಕನ್ ಪಡೆದ ಕೂಡಲೇ ನಿಮ್ಮ ಕೈಗೆ ತಿನಿಸು ತುಂಬಿದ ಸ್ಟೀಲ್ ಪ್ಲೇಟ್, ಜೊತೆಗೆ ಸ್ಟೀಲ್ ಚಮಚ. ಸ್ಟೀಲ್ ಬೌಲ್ ಲ್ಲಿ ತುಂಬಿರುವ ಚಟ್ನಿ. ನೀರು ಬೇಕೆಂದು ಕೇಳಿದಿರೋ... ಸ್ಟೀಲ್ ಲೋಟದಲ್ಲೇ ನೀರು. ಆಶ್ಚರ್ಯಗೊಂಡ ನೀವು ಅಲ್ಲೇ ಶಾಮಿಯಾನದಡಿ ಕುಳಿತು ತಿಂಡಿ ತಿಂದು ಪ್ಲೇಟನ್ನು ಅಂಗಡಿಯ ಬಳಿ ಎಲ್ಲಿಡಬೇಕು ಎಂದು ಆಚೀಚೆ ನೋಡುತ್ತಿರುವಾಗಲೇ ಅಂಗಡಿಯವನಿಂದ ನಿಮಗೆ ಸೂಚನೆ - ಸರ್ ದಯವಿಟ್ಟು ಅಲ್ಲಿ ಸಾಲಾಗಿ ಕಾಣುತ್ತಿರುವ ಬುಟ್ಟಿಯಲ್ಲಿ ಹಾಕಿಬಿಡಿ. ಏಕೋ ಏನೋ ವಿಶೇಷ ಕಾಣುತ್ತಿದೆಯಲ್ಲ ಎಂದು ಆಲೋಚಿಸುತ್ತಾ ಅತ್ತ ಹೆಜ್ಜೆ ಹಾಕಿದ ನಿಮಗೆ ಮತ್ತೂ ಆಶ್ಚರ್ಯ! ಅಲ್ಲಿ ತಟ್ಟೆ, ಲೋಟ, ಚಮಚ ಎಂದು ಹಣೆಪಟ್ಟಿ ಅಂಟಿಸಿಕೊಂಡು ಸಾಲಾಗಿ ಕುಳಿತ ಕ್ರೇಟ್ (ಬುಟ್ಟಿ)ಗಳು. ಸರ್ ಉಳಿದಿರುವ ಪದಾರ್ಥ ಇದರಲ್ಲಿ ಹಾಕಿ. ತಟ್ಟೆ ಇಲ್ಲಿ ಇಡಿ, ಮೇಡಂ ಚಮಚ ಇಲ್ಲಿ ಹಾಕಿ... ಎಂದು ಆಗ್ರಹಪೂರ್ವಕ, ಆತ್ಮೀಯ ಮಾತುಗಳನ್ನಾಡುವ ಸ್ವಯಂಸೇವಕರು.

ತುಂಬಾ ವಿಶೇಷವಾಗಿದೆಯಲ್ಲ...ಯಾರು ಇಷ್ಟೆಲ್ಲಾ ವ್ಯವಸ್ಥೆ ಮಾಡಿರುವವರು ಎಂದು ಯೋಚಿಸುತ್ತ ಪಕ್ಕಕ್ಕೆ ಹೊರಳಿದರೆ ಅಲ್ಲಿ ನಿಮಗೆ ಕಾಣುವುದು "ಅದಮ್ಯ ಚೇತನ" ಫಲಕ. ಪ್ರತಿನಿತ್ಯ ಲಕ್ಷಾಂತರ ಮಕ್ಕಳಿಗೆ ಬಿಸಿಯೂಟ ತಯಾರಿಸುವ ಅಡುಗೆಮನೆಯನ್ನು ಕಸರಹಿತ ಹಾಗೂ ಪ್ಲಾಸ್ಟಿಕ್ ಮುಕ್ತ ಮಾಡಿರುವ ಅದಮ್ಯ ಚೇತನವು, ಹಲವು ವರ್ಷಗಳಿಂದ ಸಮಾಜದಲ್ಲಿ ಈ ಕುರಿತು ಜಾಗೃತಿ ಮೂಡಿಸುವ ಅಭಿಯಾನವನ್ನು ಕೈಗೊಂಡಿದೆ. ಅದರ ಅಂಗವಾಗಿ ಕೈಗೊಂಡಿರುವ ಕ್ರಮಗಳಲ್ಲಿ "ಪ್ಲೇಟ್ ಬ್ಯಾಂಕ್ " ಸ್ಥಾಪನೆ ಬಹು ಮುಖ್ಯವಾದುದು. ಯಾವುದೇ ದೊಡ್ಡ ಕಾರ್ಯಕ್ರಮಗಳಲ್ಲಿ ಬಳಸಲು ಇಲ್ಲಿಂದ ಸ್ಟೀಲ್ ತಟ್ಟೆ, ಲೋಟ, ಬೌಲ್, ಚಮಚಗಳನ್ನು ಎರವಲು ಪಡೆದು ಅನಂತರ ಹಿಂದಿರುಗಿಸಬಹುದು. ಬೆಂಗಳೂರಿನ ಜಯನಗರದಲ್ಲಿ ಏಪ್ರಿಲ್ 6 ರಿಂದ 10 ರ ವರೆಗೆ ನಡೆದ "ಸ್ವದೇಶಿ ಮೇಳ" ದಲ್ಲೂ ಈ ವ್ಯವಸ್ಥೆಯನ್ನು ಯಶಸ್ವಿಯಾಗಿ ಅಳವಡಿಸಿದ್ದು ವಿಶೇಷವಾಗಿತ್ತು. ಶೇ. 100 ರಷ್ಟು ಶುದ್ಧತೆಯನ್ನು ಕಾಪಾಡಲು ಊಟೋಪಹಾರ ಸೇವಿಸಿದ ನಂತರ ಆ ಪ್ಲೇಟ್ ಗಳನ್ನು ಕೈಯಲ್ಲಿ ಸ್ವಚ್ಛಗೊಳಿಸಿ, ಅನಂತರ ಪಾತ್ರೆ ತೊಳೆಯುವ ಯಂತ್ರದ ಮೂಲಕ ಮತ್ತೊಮ್ಮೆ ಸ್ವಚ್ಛಗೊಳಿಸಿ ಪುನರ್ ಬಳಕೆಗೆ ನೀಡಲಾಗುತ್ತಿತ್ತು.



ಇಲ್ಲಿ ಎಲ್ಲೂ ಪ್ಲಾಸ್ಟಿಕ್ ಬಾಟಲಿಗಳಲ್ಲಿ ನೀರು ಸಿಗುತ್ತಿರಲಿಲ್ಲ. ಕಾರ್ಯಕ್ರಮಕ್ಕೆ ಬಂದವರು ಮನೆಯಿಂದ ಅಕಸ್ಮಾತ್ ನೀರನ್ನು ತಂದಿರದಿದ್ದರೆ, ಅದಮ್ಯ ಚೇತನದಿಂದ ಸ್ಟೀಲ್ ಬಾಟಲ್ ನಲ್ಲಿ ನೀರು ತುಂಬಿಸಿ ಕೊಡಲಾಗುತ್ತಿತ್ತು. ಸೆಕ್ಯುರಿಟಿಗಾಗಿ ಅದರ ಹಣ ಪಡೆದು, ಬಾಟಲನ್ನು ಹಿಂದಿರುಗಿಸಿದಾಗ ಆ ಮೊತ್ತವನ್ನು ಹಿಂದಿರುಗಿಸಲಾಗುತ್ತಿತ್ತು. ಅದಮ್ಯ ಚೇತನವು ಈ ನಿಟ್ಟಿನಲ್ಲಿ ಕೈಗೊಂಡ ಇನ್ನೊಂದು ಕ್ರಮವೆಂದರೆ, ಮೇಳದ ಮಾರಾಟ ಮಳಿಗೆಗಳ ಪ್ರವೇಶ ದ್ವಾರದಲ್ಲೇ ಬಟ್ಟೆಯಿಂದ ಮಾಡಿದ ಪುನರ್ ಬಳಕೆಯ ಕೈಚೀಲವನ್ನು ಉಚಿತವಾಗಿ ನೀಡಿ ಪ್ಲಾಸ್ಟಿಕ್ ಚೀಲ ಬಳಸದಿರುವಂತೆ ಮನವಿ ಮಾಡುವುದು! ಈ ಚೀಲವನ್ನು ಅದಮ್ಯ ಚೇತನದ ಮಹಿಳಾ ಕಾರ್ಯಕರ್ತೆಯರು ಮರುಬಳಕೆಗೆ ಯೋಗ್ಯವಾದ ಹಳೆಯ ಸೀರೆಯಿಂದ ತಯಾರಿಸುತ್ತಾರೆ ಎಂಬುದು ಗಮನಾರ್ಹ ಅಂಶ. ಮಕ್ಕಳ ತಂಡವೊಂದು ಮೇಳದ ಎಲ್ಲ ಭಾಗದಲ್ಲಿ ಓಡಾಡುತ್ತಾ ಪ್ಲಾಸ್ಟಿಕ್ ಬಳಸದಂತೆ ಜನಜಾಗೃತಿ ಮೂಡಿಸುವ ಘೋಷಣೆಗಳನ್ನು ಕೂಗುತ್ತಿದ್ದುದು ಹೃದಯಸ್ಪರ್ಶಿಯಾಗಿತ್ತು. ಹೀಗೆ ಸ್ವದೇಶಿ ಮೇಳದ ಇಡೀ ವಾತಾವರಣವು ಕಸಮುಕ್ತ, ಪ್ಲಾಸ್ಟಿಕ್ ಮುಕ್ತವಾಗಿ ಇದ್ದುದು ಹಾಗೂ ಈ ಕುರಿತು ಜನರಲ್ಲಿ ಜಾಗೃತಿ ಮೂಡಿಸುವ ಪರಿಣಾಮಕಾರಿ ಪ್ರಯತ್ನದ ಫಲವಾಗಿ ಎಲ್ಲರ ಗಮನ ಸೆಳೆಯಿತು. ಲಕ್ಷಾಂತರ ಜನರು ಮೊಟ್ಟ ಮೊದಲ ಬಾರಿಗೆ ಇಂತಹ ವ್ಯವಸ್ಥೆಯನ್ನು ಕಂಡು ಆಶ್ಚರ್ಯಪಟ್ಟರು. ಮೆಚ್ಚುಗೆ ವ್ಯಕ್ತಪಡಿಸಿದರು. ಎಲ್ಲಕ್ಕಿಂತ ಮಿಗಿಲಾಗಿ ಮನಸಾರೆ ಒಪ್ಪಿ, ಸ್ವಲ್ಪವೂ ಬೇಸರಿಸದೇ ಸಹಕಾರ ನೀಡಿದರು. ದೃಢವಾಗಿ ನಿಂತು ಆಗ್ರಹಪೂರ್ವಕ ಇಂತಹ ವ್ಯವಸ್ಥೆಯನ್ನು ಕಲ್ಪಿಸಿದಾಗ ಖಂಡಿತವಾಗಿಯೂ ನಾವು ಸ್ವೀಕರಿಸುತ್ತೇವೆ ಎಂಬ ಸಂದೇಶವನ್ನು ಸಾರಿದರು. ★

# ಅದಮ್ಯಚೇತನ ತಿಂಗಳ ವರದಿ (15.03.2022 - 15.04.2022)

### ಹಸಿರು ಭಾನುವಾರ

ಅದಮ್ಯ ಚೇತನ ನಿರಂತರವಾಗಿ ಆಚರಿಸುತ್ತ ಬಂದಿರುವ ಹಸಿರು ಭಾನುವಾರದ 325ನೇ ಕಾರ್ಯಕ್ರಮವು ದಿವಂಗತ ಚಿತ್ರನಟ ಪುನೀತ್ ರಾಜಕುಮಾರ್ ಅವರ ಸ್ಮರಣೆಗೆ ಅರ್ಪಿತವಾದುದೊಂದು ವಿಶೇಷ. ಹೆಚ್ ಎಸ್ ಆರ್ ವಿಸ್ತರಣೆಯ ಸ್ವಾಭಿಮಾನ ಉದ್ಯಾನವನದಲ್ಲಿ ಜರುಗಿದ ಈ ವಿಶೇಷ ಕಾರ್ಯಕ್ರಮದ ಅತಿಥಿಗಳಾಗಿ ಪುನೀತ್ ಅವರ ಸೋದರ, ಚಿತ್ರ ನಟ ಶ್ರೀ ರಾಘವೇಂದ್ರ ರಾಜಕುಮಾರ್ ಭಾಗವಹಿಸಿದ್ದರು. 326 ಮತ್ತು 327ನೇ ಹಸಿರು ಭಾನುವಾರದ ಕಾರ್ಯಕ್ರಮಗಳು ಎನ್ ಜಿ ಇ ಎಫ್ ಲೇ ಔಟ್ ಸಮೀಪದ ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿ ಜರುಗಿದವು. 328ನೇ ಹಸಿರು ಭಾನುವಾರವನ್ನು ಕಳೆದ ಏಪ್ರಿಲ್ 10ರಂದು ಜಯನಗರದ ನಾಲ್ಕನೇ ಟಿ ಬ್ಲಾಕಿನ ಶಕ್ತಿ ಗಣಪತಿ ದೇವಾಲಯದ ಆವರಣದಲ್ಲಿ ಗಿಡಗಳನ್ನು ನೆಡುವ ಮೂಲಕ ಆಚರಿಸಲಾಯಿತು. ದಿನಾಂಕ 17 ಏಪ್ರಿಲ್ 2022ರಂದು 329ನೇ ಹಸಿರು ಭಾನುವಾರದ ಅಂಗವಾಗಿ ಕಾರ್ಯಕರ್ತರು ಗುಬ್ಬಲಾಳದ ಆವರಣದ ಗೌಡನಪಾಳ್ಯ ಕೆರೆಯ ಪರಿಸರದಲ್ಲಿ ಅನೇಕ ಸಸಿಗಳನ್ನು ನೆಟ್ಟರು. ಅದಮ್ಯಚೇತನ ಸಂಸ್ಥೆಯ ಸಹಯೋಗದಲ್ಲಿ ಬಳ್ಳಾರಿಯ ಸಮೃದ್ಧಿ ಫೌಂಡೇಶನ್ ಸದಸ್ಯರೂ ರಾಯಚೂರಿನ ಸ್ವಯಂಸೇವಾ ಸಂಸ್ಥೆಯ ಕಾರ್ಯಕರ್ತರೂ ಹಸಿರು ಭಾನುವಾರ ಕಾರ್ಯಕ್ರಮವನ್ನು ನಿರಂತರವಾಗಿ ಆಚರಿಸುತ್ತಿದ್ದಾರೆ.

### ಪೌರಕಾರ್ಮಿಕರಿಗೆ ಆಹಾರ ಪೂರೈಕೆ

ಅದಮ್ಯ ಚೇತನವು ಪ್ರತಿ ನಿತ್ಯ ಬೆಂಗಳೂರಿನ ಸಾವಿರಾರು ಪೌರಕಾರ್ಮಿಕರಿಗೆ ಆಹಾರವನ್ನು ಒದಗಿಸುವ ಕರ್ತವ್ಯದಲ್ಲಿ ತೊಡಗಿಕೊಂಡಿದ್ದು, ನಗರದ 300 ಕೇಂದ್ರಗಳ ಮೂಲಕ ಪ್ರತಿದಿನ ಹದಿನಾಲ್ಕು ಸಾವಿರ ಪೌರಕಾರ್ಮಿಕರಿಗೆ ಆಹಾರವನ್ನು ಪೂರೈಸುವ ಬೃಹತ್ ಯೋಜನೆಯನ್ನು ಕಾರ್ಯಗತಗೊಳಿಸುವಲ್ಲಿ ಅದಮ್ಯ ಚೇತನ ಯಶಸ್ವಿಯಾಗಿದೆ.

### ಶ್ರೀ ಚೇತನ

ಶ್ರೀ ಚೇತನ ಆನ್ ಲೈನ್ ಕಾರ್ಯಕ್ರಮಗಳು ಪ್ರತಿ ಮಂಗಳವಾರದಂದು ನಡೆಯುತ್ತಿದ್ದು ಪ್ರತಿ ವಾರ ದೇಶಭಕ್ತಿ ಗೀತೆ, ಮಂಕುತಿಮ್ಮನ ಕಗ್ಗ ವಾಚನ, ಔಷಧೀಯ ಸಸ್ಯ ಪರಿಚಯ, ಆರೋಗ್ಯ ಅಡುಗೆ ಮೊದಲಾದ ವೈವಿಧ್ಯಮಯ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸಲಾಗುತ್ತಿದೆ.

### ಗೀತಾಪಠಣ

ಅದಮ್ಯ ಚೇತನದಲ್ಲಿ ಪ್ರತಿ ಗುರುವಾರ ಸಂಜೆ ಒಂದು ಗಂಟೆಯ ಅವಧಿಯಲ್ಲಿ ಗೀತಾಪಠನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ. ಭಗವದ್ಗೀತೆಯ ಪಠನದ ನಂತರ ಕಾರ್ಯಕರ್ತರು ತರಕಾರಿ ಹೆಚ್ಚುವ ಕೆಲಸದಲ್ಲಿ ಕೈಜೋಡಿಸುವ ಮೂಲಕ ಅದಮ್ಯಚೇತನದ ಅಡುಗೆಮನೆಯ ಕಾರ್ಯದಲ್ಲಿ ನೆರವಾಗುತ್ತಿದ್ದಾರೆ.

### ಅನ್ನದಾನ

ಅದಮ್ಯಚೇತನದ ವತಿಯಿಂದ ನಿತ್ಯ ಅನ್ನದಾನ ಕಾರ್ಯಕ್ರಮವು ನಿರಂತರವಾಗಿ ನಡೆಯುತ್ತಿದ್ದು, ಗವಿಪುರ, ನಗರ್ತಪೇಟೆ, ಮಾರೇನಹಳ್ಳಿ, ಜಯನಗರ ಮೊದಲಾದ ಕಡೆಗಳಲ್ಲಿ ಅಗತ್ಯವಿರುವ ಜನರು ರುಚಿಕರವಾದ ಭೋಜನಸೌಲಭ್ಯವನ್ನು ಪಡೆಯುತ್ತಿದ್ದಾರೆ. ★

# ಅದಮ್ಯ ಸೇವಾ

ಇತ್ತೀಚೆಗೆ ಬೆಂಗಳೂರಿನಲ್ಲಿ ಯಶಸ್ವಿಯಾಗಿ ಜರುಗಿದ ಸ್ವದೇಶಿ ಮೇಳದಲ್ಲಿ ಅದಮ್ಯ ಚೇತನದ ಸಕ್ರಿಯ ಪಾತ್ರವೂ ಗಮನಾರ್ಹವಾಗಿತ್ತು. ಅನೇಕ ಗಣ್ಯರು ಅದಮ್ಯ ಚೇತನದ ಮಳಿಗೆಗೆ ಭೇಟಿನೀಡಿ ಸಂಸ್ಥೆಯ ಕಾರ್ಯನಿರ್ವಹಣೆಯ ಬಗೆಗೆ ಮೆಚ್ಚುಗೆ ವ್ಯಕ್ತಪಡಿಸಿದರು.



















ಅದಮ್ಯ ಚೇತನದ ಅಧ್ಯಕ್ಷರಾದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಇತ್ತೀಚೆಗೆ ಜೋಧ್‌ಪುರದ ಅದಮ್ಯಚೇತನ ಕೇಂದ್ರಕ್ಕೆ ಭೇಟಿನೀಡಿದ ಸಂದರ್ಭದ ಚಿತ್ರ



ಪುನೀತ್ ರಾಜಕುಮಾರ್ ಅವರ ಸ್ಮರಣೆಗೆ ಅರ್ಪಿತವಾದ 325ನೇ ಹಸಿರು ಭಾನುವಾರದ ಕಾರ್ಯಕ್ರಮದಲ್ಲಿ ಶ್ರೀ ರಾಘವೇಂದ್ರ ರಾಜಕುಮಾರ್ ಮತ್ತಿತರ ಗಣ್ಯರು ಪಾಲ್ಗೊಂಡಿದ್ದರು.

## ಅನಂತ ಚಿತ್ರಸಂಪುಟ

ರಾಜಕಾರಣದ ನಿರಂತರ ಕೆಲಸ, ಪ್ರವಾಸಗಳ ನಡುವೆಯೂ ಶ್ರೀ ಅನಂತಕುಮಾರ್ ಅವರು ವಿವಿಧೆಡೆಗಳಲ್ಲಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲೂ ಕಲಾಪ್ರದರ್ಶನಗಳಲ್ಲೂ ಪಾಲ್ಗೊಂಡು ಎಲ್ಲರೊಡನೆ ಉತ್ಸಾಹದಿಂದ ಬೆರೆಯುತ್ತಿದ್ದರು. ಅವರ ಜನಪ್ರಿಯತೆಗೆ ಇದೂ ಒಂದು ಪ್ರಮುಖ ಕಾರಣವೆಂದರೆ ಅತಿಶಯವಲ್ಲ.











